بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ವಾರ್ಷಿಕ ಶುಲ್ಕ ರೂ.575/-

ಸಂಚಿಕೆ: 31

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

05 ಆಗಸ್ಟ್ 2021, 05 ಝುಹೂರ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
25 ಝುಲ್ ಹಜ್ಜ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الرَّسُوۡلُ بَلِّغۡ مَاۤ اُنۡزِلَ اِلَيۡكَ مِنۡ
رَّبِّكَ‌ؕ وَاِنۡ لَّمۡ تَفۡعَلۡ فَمَا بَلَّغۡتَ رِسَالَـتَهٗ‌ؕ
وَاللّٰهُ يَعۡصِمُكَ مِنَ النَّاسِ‌ؕ اِنَّ اللّٰهَ لَا
يَهۡدِى الۡقَوۡمَ الۡكٰفِرِيۡنَ (المائدہ:68)

**(ಅಲ್‌ಮಾಇದ: 66)**

**ಅಂದರೆ: ಎಲೈ ಸಂದೇಶವಾಹಕನೇ, ನಿನಗೆ ನಿನ್ನ ಪ್ರಭುವಿನಿಂದ ಅವತೀರ್ಣವಾದುದನ್ನು ನೀನು (ಜನರಿಗೆ) ತಲಪಿಸು. ನೀನು ಹಾಗೆ ಮಾಡದಿದ್ದರೆ, ನೀನು ಅವನ ಸಂದೇಶವನ್ನು ತಲಪಿಸಲೇ ಇಲ್ಲ (ಎಂದಾಗುತ್ತದೆ). ಅಲ್ಲಾಹನು ನಿನ್ನನ್ನು ಮನುಷ್ಯರಿಂದ ರಕ್ಷಿಸುವನು. ಅವಿಶ್ವಾಸಿಗಳಿಗೆ ಅಲ್ಲಾಹನು ಖಂಡಿತವಾಗಿಯೂ (ವಿಜಯದ) ಮಾರ್ಗವನ್ನು ತೋರಿಸಲಾರ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಝುಕಾತ್ (ದಾನ) ಬಡವರ ಹಕ್ಕಾಗಿದೆ

(1395) ಹಝ್ರತ್ ಇಬ್ನು ಅಬ್ಬಾಸ್(ರ)ವರದಿ ಮಾಡುತ್ತಾರೆ:– ನಬಿ(ಸ) ಹಝ್ರತ್ ಆಇಶ(ರ)ರವರನ್ನು ಯಮನ್ ಕಡೆ ಕಳುಹಿಸಿದರು ಮತ್ತು ಹೀಗೆ ಹೇಳಿದರು: ಅವರಿಗೆ ಈ ಸತ್ಯ ಸಾಕ್ಷಿ ಕಡೆ ಕರೆ ನೀಡಿರಿ– ಅಲ್ಲಾಹನ ಹೊರತು ಯಾರು ಆರಾಧನೆಗೆ ಅರ್ಹನಲ್ಲ ಮತ್ತು ನಾನು ಅಲ್ಲಾಹನ ಸಂದೇಶವಾಹಕನಾಗಿದ್ದೇನೆ. ಅಂದ ಹಾಗೆ ಅವರು ಇದನ್ನು ಸ್ವೀಕರಿಸಿದರೆ ಅವರಿಗೆ ತಿಳಿಸಿರಿ– ಅಲ್ಲಾಹನು ಅವರಿಗಾಗಿ ಹಗಲಿರಳಿನಲ್ಲಿ ಐದು ಹೊತ್ತಿನ ನಮಾಝುಗಳನ್ನು ಕಡ್ಡಾಯಗೊಳಿಸಿರಿವೆನು. ಅವರು ಅದನ್ನು ಸಹ ಒಪ್ಪಿಕೊಂಡರೆ ಮತ್ತೆ ಅವರನ್ನು ತಿಳಿಸಿರಿ ಅಲ್ಲಾಹನು ಅವರಿಗೆ ಅವರ ಸಂಪತ್ತಿನ ಮೇಲೆ ಸದಖಾ(ದಾನ) ಸಹ ಕಡ್ಡಾಯಗೊಳಿಸಿರುವೆನು. ಅದನ್ನು ಅವನು ಶ್ರೀವಂತರಿಂದ ಪಡೆದು ಬಡವರಿಗೆ ಮರಳಿಸುವೆನು.

### ಸ್ವರ್ಗಕ್ಕೆ ಕರೆದುಕೊಂದು ಹೋಗುವ ಕಾರ್ಯ

(1396) ಹಝ್ರತ್ ಅಬೂ ಅಬ್ಬಾಸ್(ರ) ಅವರು ವರದಿ ಮಾಡುತ್ತಾರೆ– ವ್ಯಕ್ತಿಯೊಬ್ಬನು ನಬಿ(ಸ)ರೊಡನೆ ಕೇಳಿದನು– ನನಗೆ ಸ್ವರ್ಗಕ್ಕೆ ಕರೆದುಕೊಂಡು ಹೋಗುವಂತಹ ಕಾರ್ಯವನ್ನು ಹೇಳಿರಿ. ಜನರು ಹೇಳಿದರು:– ಇವನಿಗೆ ಏನಾಗಿದೆ? ನಬಿ(ಸ) ಹೇಳಿದರು: ಇದು ಬಹಳ ಅವಶ್ಯವಾಗಿದೆ. ಅದಕ್ಕಾಗಿ ನೀವು ಅಲ್ಲಾಹನನ್ನು ಆರಾಧಿಸಿರಿ, ಅವನೊಡನೆ ಯಾರನ್ನು ಸ್ ಸಹಭಾಗಿಯನ್ನಾಗಿ ಮಾಡಬೇಡಿರಿ ಮತ್ತು ನಮಾಝುನ್ನು ಶ್ರದ್ಧೆಯಿಂದ ಅನಿಷ್ಠಿಸಿರಿ ಮತ್ತು ಝುಕಾತ್ ನೀಡಿರಿ ಹಾಗೂ ಪರೋಪಕಾರಿಯಾಗಿರಿ.

**(ಸಹೀ ಬುಖಾರಿ ಸಂಪುಟ–3, ಕಿತಾಬುಝ್ಝುಕಾತ್, ಮುದ್ರಣ 2008 ಖಾದಿಯಾನ್)**

**ನಾನು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇನೆ. ಅಲ್ಲಾಹನು ನನ್ನನ್ನು ಸುಧಾರಕನನ್ನಾಗಿ ಕಳುಹಿಸಿರುವನು. ಅಲ್ಲಾಹನ ಮಹೋನ್ನತ ಸ್ಥಾನದ ಅರಿವು ಅವರ ಹೃದಯಲ್ಲಿರುತ್ತಿದ್ದರೆ ನನ್ನನ್ನು ತಿರಸ್ಕಾರ ಮಾಡುತ್ತಿರಲಿಲ್ಲ. ಮತ್ತು ಅವನ ಹೆದರಿಕೆ ಮನಸ್ಸಿನಲ್ಲಿರುತ್ತಿತ್ತು. ನಾವು ಅಲ್ಲಾಹನ ಘನತೆಯನ್ನು ಕುಂದಿಸುವವರಾಗಬಾರದು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸತ್ಕರ್ಮಗಳ ಕುರುಹು

ಈ ಜನರು ಯಾವ ವಿಷಯ ಇಸ್ಲಾಮಿಗೆ ವಿರುದ್ಧವಾಗಿದೆ ಎಂಬುವುದನ್ನು ತಿಳಿಯದವರಾಗಿದ್ದಾರೆ. ನಾವು ಲಾ ಇಲಾಹ ಇಲ್ಲಲ್ಲಾಹ್ ಹೇಳುತ್ತೇವೆ. ನಮಾಝುಗಳನ್ನು ನಿರ್ವಹಿಸುತ್ತೇವೆ, ಉಪವಾಸದ ದಿನಗಳಲ್ಲಿ ಉಪವಾಸ ಇಡುತ್ತೇವೆ, ಝುಕಾತ್ ಕೊಡುತ್ತೇವೆ. ಆದರೆ ನಾನು ಹೇಳುತ್ತೇನೆ. ಇವೆಲ್ಲಾ ಕರ್ಮಗಳು, ಸತ್ಕರ್ಮಗಳೆಂಬ ನೆಲೆಯಲ್ಲಿ ಮಾಡುತ್ತಿಲ್ಲ. ಬದಲು ಕೇವಲ ತಿರುಳಿಲ್ಲದ ವಸ್ತುಗಳಂತೆ ಇವೆ. ಇವು ಸತ್ಕರ್ಮಗಳಾಗಿರುತ್ತಿದ್ದರೆ ಏಕೆ ಸರಿಯಾದ ಫಲಿತಾಂಶ ದೊರೆಯುವುದಿಲ್ಲ? ಸತ್ಕರ್ಮಗಳು ಎಲ್ಲ ರೀತಿಯ ಮಿಶ್ರಣ ಗೊಂದಲಗಳಿಂದ ಮುಕ್ತವಾಗಿರುತ್ತವೆ. ಆದರೆ ಇವುಗಳಲ್ಲಿ ಆ ಮಾತು ಎಲ್ಲಿವೆ? ನಾನು ನಿಶ್ಚಿತವಾಗಿ ಹೇಳಬಲ್ಲೆ. ಒಬ್ಬ ಸಜ್ಜನನಾಗಿ ಸತ್ಯವಂತನನ್ನು ವಿರೋಧಿಸುವವನಾಗುವುದು ಸಾಧ್ಯವಿಲ್ಲ. ಅದಾಗ್ಯೂ ಈ ಜನರು ನಮ್ಮನ್ನು ನಾಸ್ತಿಕರು, ಗೊಂದಲಕಾರಿಗಳು ಎನ್ನುತ್ತಾರೆ ಮತ್ತು ಅಲ್ಲಾಹನಿಗೆ ಹೆದರುವುದಿಲ್ಲ ಎನ್ನುತ್ತಾರೆ. ನಾನು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇನೆ. ಅಲ್ಲಾಹನು ನನ್ನನ್ನು ಸುಧಾರಕನಾಗಿ ಕಳುಹಿಸಿರುವನು ಎಂದು. ಅವರ ಮನಸ್ಸಿನಲ್ಲಿ ಸ್ವಲ್ಪವಾದರೂ ಅಲ್ಲಾಹನ ಮಹಾನತೆ ಇರುತ್ತಿದ್ದರೆ ನನ್ನನ್ನು ತಿರಸ್ಕರಿಸುತ್ತಿರಲಿಲ್ಲ. ಅವನಿಂದ ಹೆದರುತ್ತಿದ್ದರು. ನಾವು ಅಲ್ಲಾಹನ ಘನತೆಗಳನ್ನು ಕುಂದಿಸುವವರಾಗಬಾರದು. ಆದರೆ ಇದು ಯಾವಾಗ ಸಾಧ್ಯವಿತ್ತೆಂದರೆ, ಅವರಲ್ಲಿ ನಿಜವಾದ ಮತ್ತು ಉನ್ನತಮಟ್ಟದ ವಿಶ್ವಾಸ ಅಲ್ಲಾಹನ ಮೇಲೆ ಇರಿಸುವವರಾಗಬೇಕಿತ್ತು. ಅಂತ್ಯ ತೀರ್ಮಾನ ದಿನದಿಂದ ಹೆದರುವವರಾಗಬೇಕಿತ್ತು. ಲಾ ತಖ್ಫು ಮಾ ಲೈಸಲಕ ಬಿಹಿ ಇಲ್ಮ್ (ಬನೀ ಈಸ್ರಾಯೀಲ್ –37) ಮೇಲೆ ಅವರು ನಡೆಯುವವರಾಗಬೇಕಿತ್ತು.

### ಅಲ್ಲಾಹನ ಸ್ನೇಹಿತರ ತಿರಸ್ಕಾರ ವಿಶ್ವಾಸಹರಣಕ್ಕೆ ಕಾರಣವಾಗುತ್ತದೆ.

ಅವರ ಬೌದ್ಧಿಕಶಕ್ತಿ ಮತ್ತು ವಿಶ್ವಾಸದ ಶಕ್ತಿ ಪ್ರವಾದಿಯನ್ನು ತಿರಸ್ಕರಿಸಿದರೆ ಕಾಫಿರ್ (ಅವಿಶ್ವಾಸಿ) ಗಳಾಗುತ್ತಾರೆ ಎಂಬ ಮಟ್ಟಕ್ಕೆ ತಿಳಿದವರಾಗಿದ್ದಾರೆ. ಆದರೆ ಸಜ್ಜನರ (ವಲಿ) ನ್ನು ತಿರಸ್ಕರಿಸಿದರೆ ಹೇಗೆ

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

**ಬಹಾಯಿ ಜನರು ಹೋದಲ್ಲೆಲ್ಲಾ ಪ್ರತ್ಯೇಕ ಕಾನೂನು ರಚಿಸುತ್ತಾರೆ. ಅದೇ ಪರಿಸ್ಥಿತಿ ಕ್ರೈಸ್ತರದ್ದಾಗಿದೆ. ಅದರ ಮುಂದೆ ಇಸ್ಲಾಮಿನ ಎಲ್ಲಾ ಶಿಕ್ಷಣವು ಬೇರೆಯವರ ಮೇಲೆ ಅವಲಂಬಿತವಾಗಿದೆ. ಕಡಿಮೆ ಮಾಡುವ ಅವಶ್ಯಕತೆಯೂ ಇಲ್ಲ. ಹೆಚ್ಚು ಮಾಡುವ ಅವಶ್ಯಕತೆಯೂ ಇಲ್ಲ. ಇಸ್ಲಾಮ್ ಪ್ರಾರಂಭದಿಂದಲೇ, "ಲಾ ಇಲ್ಲಾಹ ಇಲ್ಲಲ್ಲಾಹ ಮುಹಮ್ಮದು ರಸೂಲುಲ್ಲಾಹ್" ಎಂದಿದೆ. ಅನಂತರ ಅದರಲ್ಲಿ ಯಾವ ಬದಲಾವಣೆಯೂ ಇಲ್ಲ.**

ಸಯ್ಯುದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಇಬ್ರಾಹಿಂ ವಚನ 27 **ವಮಸಲು ಕಲಿಮತಿನ್ ಖಬೀಸತಿನ್ ಕಶಜರತಿನ್ ಖಬೀಸತಿನಿಜ್‌ತುಸ್ಸತ್ ಮಿನ್ ಫೌಖಿಲ್ ಅರ್‌ಝಿ ಮಾ ಲಹಾ ಮಿನ್ ಖರಾರಿನ್** ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ:

ಉತ್ತಮ ವೃಕ್ಷದ ಎದುರಾಗಿ ಮಿಥ್ಯ ಧರ್ಮಗಳು ಪ್ರಸ್ತುತಪಡಿಸುವ ಮಾತುಗಳು ಇಂತಿವೆ.

(1) ಅದರ ರೂಪ ಅಸಹ್ಯವಾಗಿರಬೇಕು.
(2) ಉನ್ನತ ಮತ್ತು ಕೀಳುಮಟ್ಟದ ಶಿಕ್ಷಣಗಳನ್ನು ಮಿಶ್ರಣಗೊಳಿಸಿ ಪ್ರಸ್ತುತಪಡಿಸಬೇಕು.
(3) ಉತ್ತಮ ಫಲ ದೊರೆಯಬಾರದು, ಅಂದರೆ ಅದರ ಮೇಲೆ ನಡೆದು ಅಲ್ಲಾಹನ ಸಾಮಿಪ್ಯ ಪಡೆಯುವವರಾಗಬಾರದು. ಉದಾಹರಣೆಗೆ ಬಹಾಯಿ ಧರ್ಮ ಅದು ಪ್ರಕಟವಾಗಿ ಸುಮಾರು 90 ವರ್ಷ ಕಳೆದಿವೆ. (ಅಂದರೆ ಬಾಬ್ ದಾವೆಯಿಂದ ಹಿಡಿದು

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ಅಬ್ದುಲ್ಲ ಆಥಮನಿಗೆ ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನ ಅವರು ನಾನು ಇಸ್ಲಾಮಿನ ಭವಿಷ್ಯವಾಣಿಯ ಪ್ರಭಾವದಿಂದ ಹೆದರಿಕೊಂಡಿಲ್ಲ ಎಂದು ಒಪ್ಪಿಕೊಳ್ಳಬೇಕು

**ಆಥಮನಿಗೆ ಸಾರ್ವಜನಿಕವಾಗಿ ಆಣೆ ಮಾಡಲು ಅವಶ್ಯಕತೆ ಏಕೆ ಇತ್ತು.**

ಈ ಮುಂಚೆ ವಿವರವಾಗಿ ನಾವು ಪ್ರಸ್ತುತಪಡಿಸಿದ್ದೇವೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿಯ ಪ್ರಭಾವದಿಂದ ಆಥಮನ ಸ್ಥಿತಿಯು ಒಂದು ಶವದ ರೀತಿಯದ್ದಾಗಿತ್ತು. ಅವರು ಹೆದರುವಿಕೆ ಮತ್ತು ಅಳುವ ವಿಷಯವು ನೂರ್ ಅಫ್ಶಾಂ ಪತ್ರಿಕೆಯಲ್ಲಿ ಮುದ್ರಣಗೊಂಡಿತ್ತು. ಆದರೆ ನಂತರ ಅವರು ತನ್ನ ಹೆದರಿಕೆಯು ಭವಿಷ್ಯವಾಣಿಗೆ ಸಂಬಂಧಿಸಿದ್ದಾಗಿರಲಿಲ್ಲ. ಬದಲು ಜಮಾಅತಿನವರ ಹಲ್ಲೆಯಿಂದಾಗಿದೆ. ಅದೇ ಕಾರಣದಿಂದ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ಪದೇ ಪದೇ ಆಣೆ ಮಾಡಲು ಕರೆ ನೀಡಿದರು. ಅದರಿಂದ ಸತ್ಯ ಬಯಲಾಗುವುದು ಮತ್ತು ಜನರ ಮುಂದೆ ನಿಜಸ್ಥಿತಿ ಸ್ಪಷ್ಟವಾಗುವುದು. ಅವರು ಮೌಲ್ವಿಗಳಿಗೆ ಹಾಗೂ ಪಾದರಿಯವರಿಗೆ ಆಥಮನು ಅಲ್ಲಾಹನ ಮೇಲೆ ಆಣೆ ಮಾಡಲು ಪ್ರೇರೇಪಿಸಲು ಕರೆ ನೀಡಿದರು. ಸ್ವಯಂ ಆಥಮನಿಗೆ ಪತ್ರ ಬರೆದು ಅಲ್ಲಾಹನ ಆಣೆ ಮಾಡಲು ಕರೆದರು ಆದರೆ ಆಥಮನ ಮೇಲೆ ಯಾವ ಪ್ರಭಾವವು ಬೀರಲಿಲ್ಲ. ಈ ಪೈಕಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳಿಂದ ಕೆಲವು ಹೇಳಿಕೆಗಳನ್ನು ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೇವೆ. ಅವರು ಹೇಳಿದರು.

ಆಥಮ್ ಸಾಹೇಬರ ಭವಿಷ್ಯವಾಣಿಯ ಅವಧಿಯ ಒಳಗೆ ಅವರ ಮೇಲೆ ಉಂಟಾದ ಸ್ಥಿತಿಗತಿ ಅದು ಅವರನ್ನು ಭಯದಿಂದ ಹುಚ್ಚನ ಹಾಗೆ ಮಾಡಿಬಿಟ್ಟಿತ್ತು. ಈ ಸ್ಥಿತಿ ಸ್ಪಷ್ಟವಾಗಿ ಸೂಚಿಸುತ್ತದೆ ಅವಶ್ಯವಾಗಿ ಅವರ ಹೃದಯದ ಮೇಲೆ ಪ್ರಭಾವ ಬೀರಿತ್ತು. ಆನಂತರ ಅವರಿಂದಲೇ ಒಪ್ಪಿತ ವಿಷಯ ನೂರ್‌ಅಫ್ಶಾಂ ಪತ್ರಿಕೆಯಲ್ಲಿ ಮುದ್ರಣಗೊಂಡಿತ್ತು. ಅವರು ಅವಶ್ಯವಾಗಿ ಈ ಅವಧಿಯಲ್ಲಿ ಭಯದ ಸ್ಥಿತಿಯಲ್ಲಿತ್ತು. ಅವರು ಹೇಳಿದಂತಹ ಕಾರಣ ಅವರಿಂದಲೇ ಸಾಬೀತುಪಡಿಸಲು ಸಾಧ್ಯವಾಗಲಿಲ್ಲ. ಅಂದ ಹಾಗೆ ನ್ಯಾಯಯುತವಾಗಿ ನೋಡಿದರೆ ಸ್ವಯಂ ಅವರು ಅವರ ಹೇಳಿಕೆಯ ಮೇರೆಗೆ, ಆಣೆ ಮಾಡಿ ತನ್ನ ಅಪವಾದ ದೂರ ಮಾಡಿಕೊಳ್ಳಬಹುದಾಗಿದೆ. ಅವರು ಖುದ್ದಾಗಿ ನಿರ್ಮಿಸಿಕೊಂಡ ಸ್ಥಿತಿ, ಆಣೆವಹಿಸಿ ಖುದ್ದು ತೃಪ್ತವಾಗಬಹುದು, ಅಂದರೆ ನಾನು ಹೇಳಿದಂತೆ ಸಾರ್ವಜನಿಕವಾಗಿ ಆಣೆವಹಿಸಲಿ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ–9, ಪುಟ–88)

ಅವರು ಹೇಳಿದರು. ಇಷ್ಟೆಲ್ಲಾ ಸಕಾರಣವಿದ್ದರೂ ಆಥಮ ಸಾಹೇಬರಿಗೆ ಅವರ ಸತ್ಯವನ್ನು ವಂಚಿಸುವ ಕಾಯಕ ಹಿಡಿಯಬಾರದೆಂದರೆ, ಮತ್ತು ಅವರನ್ನು ಪರಿಗಣಿಸಬಾರದೆಂದರೆ ಸ್ವಯಂ ಹೊಣೆ ಹೊರುವುದು ಅವರ ಈ ಕರ್ತವ್ಯವಾಗಬೇಕು. ಅವರು ತಮ್ಮ ಮೇಲೆ ಆ ಮೂರು ಆಕ್ರಮಣಗಳನ್ನು ಅದು ಮಾನವ ನೆಲೆಯದ್ದಾಗಿದ್ದವು ಎಂದು ಸಾಬೀತುಪಡಿಸಲಾಗಲಿಲ್ಲ. ಈಗ ಅದರ ನಿಜ ಸ್ಥಿತಿ ತಿಳಿಯಲು ಏಕೆ ಸಾಕ್ಷ್ಯವನ್ನು ಒದಗಿಸಬಾರದು. ಅದರಲ್ಲಿ ಮೊಟ್ಟ ಮೊದಲನೆಯದ್ದು ಹಾವಿನ ಘಟನೆಯಾಗಿದೆ. ಅವರದ್ದೇ ಭಯಭೀತ ಭಾವನೆಗಳ ಫಲವಾಗಿದೆ. ಅದನ್ನು ಸಾಬೀತುಪಡಿಸಲು ಕನಿಷ್ಠ ಮಟ್ಟ ಅವರು ಆಣೆ ವಹಿಸಬೇಕಾಗಿದೆ.

ಅಂದರೆ ಆ ಭವಿಷ್ಯವಾಣಿಯನ್ನು ದೇವವಾಣಿ ಎಂದು ಭಾವಿಸಿ ನಾನು ಹೆದರಲಿಲ್ಲ. ಇಸ್ಲಾಮಿನ ಸತ್ಯತೆಯು ನನ್ನ ಮನಸ್ಸಿನಲ್ಲಿರಲಿಲ್ಲ. ಬದಲು ಹಾವು ಎಸೆದು ನಿರಂತರ ಮೂರು ಆಕ್ರಮಣಗಳು ನಿಜವಾಗಿಯೂ ನಮ್ಮ ಜಮಾಅತಿನಿಂದ ಆಗಿದೆ. ಅದರಿಂದ ನಾನು ಹೆದರಿಕೊಂಡಿದ್ದೆ ಅವರು ಸಾರ್ವಜನಿಕವಾಗಿ ಆಣೆ ಹಾಕಿ ಈ ಹೇಳಿಕೆ ನೀಡಬೇಕು. (ಝಿಯಾಉಲ್ ಹಖ್, ರೂಹಾನಿ ಖಝಾಇನ್, ಸಂಪುಟ–9, ಪುಟ–265).

**ಹಝುರತ್ ಮಸೀಹ್ ಮೌಊದ್(ಅ) ಅವರು ಆಥಮನಿಗೆ ರವಾನಿಸಿದ ಪತ್ರದಲ್ಲಿ ಶಿಕ್ಷೆಯಾಚಿಸಬೇಕು. ಏಕೆಂದರೆ ನನ್ನ ಮತ್ತು ನಿಮ್ಮ ಮಧ್ಯೆಯ ತೀರ್ಪು ಹೊರಬರಲಿ. ನಿಜವಾಗಿಯೂ ನೀವು ಸತ್ಯವಂತರಾದರೆ ಮತ್ತು ನಾನು ಮಿಥ್ಯವಾದಿ ಎಂದಾದರೆ ಏಕೆ ಈ ತೀರ್ಪನ್ನು ಮನ್ನಿಸುತ್ತಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಆಥಮ ಸಾಹೇಬರಿಗೆ ತಿಳಿದಿರಲಿ. ನಾನು ನಿಮ್ಮ ಆ ಪತ್ರವನ್ನು ಓದಿದ್ದೇನೆ. ಅದು ನೀವು ನೂರ್ ಅಫ್ಶಾಂ ಪತ್ರಿಕೆಯಲ್ಲಿ 21 ಸೆಪ್ಟೆಂಬರ್ 1894 ಪುಟದಲ್ಲಿ ಪ್ರಕಟಗೊಂಡಿತ್ತು. ಆದರೆ ವಿಷಾದನೀಯವೇನೆಂದರೆ ನೀವು ಸತ್ಯವನ್ನು ಮರೆಮಾಚಲು ಭಗೀರಥ ಪ್ರಯತ್ನ ಮಾಡುತ್ತಿದ್ದೀರಿ. ನಾನು ಅಲ್ಲಾಹನಿಂದ ಸತ್ಯ ಮತ್ತು ಪವಿತ್ರವಾದ ದಿವ್ಯವಾಣಿಯನ್ನು ಪಡೆದು ನಿಶ್ಚಿತರೂಪದಲ್ಲಿ ಸೂರ್ಯನಂತೆ ನಿಖರವಾದ ದೃಶ್ಯವನ್ನು ಕಂಡಿರುತ್ತೇನೆ. ನೀವು ಭವಿಷ್ಯವಾಣಿಯ ಅವಧಿಯಲ್ಲಿ ಇಸ್ಲಾಮಿನ ಪ್ರತಾಪ ಮತ್ತು ಸತ್ಯದಿಂದ ಪ್ರಭಾವಿತರಾಗಿ ಅದೇ ಕಾರಣದಿಂದ ಅದರದ್ದೇ ಭಯದಿಂದ ಬಳಲುತ್ತಿದ್ದೀರಿ. ನಾನು ಅಲ್ಲಾಹನ ಆಣೆವಹಿಸಿ ಹೇಳುತ್ತೇನೆ. ಇದು ಅಪ್ಪಟ ಸತ್ಯವಾಗಿದೆ ಅಲ್ಲಾಹನು ತನ್ನ ಸಂಭಾಷಣೆಯಿಂದ ನನಗೆ ಅರುಹಿದ್ದಾನೆ. ಆ ಪವಿತ್ರವಾದ ದೇವನು ನನಗೆ ತಿಳಿಸಿದ್ದಾನೆ. ಅವನು ಮನುಷ್ಯನ ಹೃದಯದಲ್ಲಿ ಅಡಗಿದ ಭಾವನೆಗಳನ್ನು ಸಹ ಬಲ್ಲವನಾಗಿದ್ದಾನೆ, ನಾನು ನನ್ನ ಈ ವಿವರಣೆಯಲ್ಲಿ ಸತ್ಯವಂತನಲ್ಲದಿದ್ದರೆ ಅಲ್ಲಾಹನು ನನಗೆ ನಿಮಗಿಂತ ಮುಂಚೆ ಮರಣ ಕೊಡುವಂತಾಗಲಿ ಆದುದರಿಂದ ನಾನು ಬಯಸುವುದೇನೆಂದರೆ ಸಾರ್ವಜನಿಕ ಸಭೆಯಲ್ಲಿ ಮರಣ ಶಿಕ್ಷೆಯನ್ನು ಬಯಸಿ ಆಣೆವಹಿಸಲಿ, ನಾನು ವಿವರಿಸಿದ ರೀತಿಯಲ್ಲಿ, ಹೀಗೆ ನನ್ನ ನಿಮ್ಮ ಮಧ್ಯೆ ತೀರ್ಪು ಹೊರಬರಲಿ. ಲೋಕವನ್ನು ಅಂಧಕಾರದಲ್ಲಿ ಇರಿಸಬಾರದು. ನೀವು ಬಯಸಿದರೆ ನಾನೂ ಸಹ ಒಂದು ವರ್ಷ ಅಥವಾ ಎರಡು ವರ್ಷ ಅಥವಾ ಮೂರು ವರ್ಷಕ್ಕಾಗಿ ಆಣೆ ವಹಿಸುವೆನು. ಏಕೆಂದರೆ ನಾನು ಚೆನ್ನಾಗಿ ಬಲ್ಲವನಾಗಿದ್ದೇನೆ. ಸತ್ಯವಂತನು ಎಂದು ನಾಶ ಹೊಂದುವುದಿಲ್ಲ ಬದಲು ಸುಳ್ಳುಗಾರನು ಅವನ ಸುಳ್ಳಿನ ಕಾರಣ ನಾಶಕ್ಕಿಂತ ಮೊದಲೇ ನಾಶಗೊಂಡಿರುತ್ತಾನೆ. ದಿವ್ಯವಾಣಿಯ ಸತ್ಯತೆ ಕುರಿತು ಮತ್ತು ಇಸ್ಲಾಮಿನ ಸತ್ಯತೆ ಕುರಿತು ನನಗೆ ಆಣೆವಹಿಸಲು ಹೇಳಿದರೆ ನಾನು ನಿಮ್ಮಿಂದ ಒಂದು ಪೈಸೆಯು ಬಯಸುವುದಿಲ್ಲ. ಆದರೆ ನೀವು ಆಣೆ ವಹಿಸಿಕೊಂಡರೆ ಅದೇ ಸಮಯಕ್ಕೆ ಮೂರು ಸಾವಿರ ರೂಪಾಯಿ ಮೊದಲಾಗಿ ಪ್ರಸ್ತುತಪಡಿಸುವೆನು. ನಾನು ರೂಪಾಯಿಗಳನ್ನು ಒಂದಿಷ್ಟು ತಡ ಮಾಡಿದರೂ ಅದೇ ಸಭೆಯಲ್ಲಿ ಸುಳ್ಳುಗಾರನೆಂದು ಎನಿಸಿಕೊಳ್ಳುವೆನು. ಅದಲ್ಲದೇ ನನಗೆ ನನ್ನ ಸುಳ್ಳಿನ ನಿಮಿತ್ತ ಮರಣದಂಡನೆ ವಿಧಿಸಿದರು. ಅಲ್ಲಾಹನಿಗೋಸ್ಕರ ಅದನ್ನು ಅನುಭವಿಸಲು ಸಿದ್ಧನಿರುವೆನು.

ಆದರೆ ವಿಷಾದದಿಂದ ಬರೆಯುತ್ತಿದ್ದೇನೆ. ಇಲ್ಲಿಯವರೆಗೆ ನೀಮಗೆ ಆಣೆವಹಿಸಲು ಸಾಧ್ಯವಾಗಿಲ್ಲ. ನೀವು ಸತ್ಯವಂತರಾದರೆ ಮತ್ತು ನಾನು ಸುಳ್ಳುಗಾರ ಎಂದಾದರೆ ಏಕೆ ನನ್ನ ಎದುರುಬದರಾಗಿ ಸಾರ್ವಜನಿಕ ಸಭೆಯಲ್ಲಿ ಮರಣದ ಶಿಕ್ಷೆ ಬಯಸಿ ಆಣೆವಹಿಸುವುದಿಲ್ಲ. ನೀವು ಈ ತೀರ್ಪಿನತ್ತ ಬರದೇ ಹೋದರೆ ನಿಮಗೆ ಕ್ರೈಸ್ತನೆಂದು ಹೇಳಿಕೊಳ್ಳಲು ಯಾವ ಹಕ್ಕು ಇರುವುದಿಲ್ಲ. ನನಗೆ ಆಶ್ಚರ್ಯದ ಮೇಲೆ ಆಶ್ಚರ್ಯವಾಗುತ್ತದೆ ನಿಜವಾಗಿಯೂ ನೀವು ಸತ್ಯವಂತರು ಮತ್ತು ನಾನು ಸುಳ್ಳುವಾದಿ ಎಂದಾದರೆ ಏಕೆ ನೀವು ಈ ತೀರ್ಪಿನಿಂದ ಪಲಾಯನ ಮಾಡುತ್ತಿದ್ದೀರಿ ದೈವಿಕ ಪರವಾಗಿದ್ದವನು ಕೇವಲ ಸತ್ಯವನ್ನು ಹಿಂಬಾಲಿಸುವನು ಮತ್ತು ಸುಳ್ಳುಗಾರನು ನಾಶಹೊಂದುವನು. ಕೆಲ ಮೂಢ ಕ್ರೈಸ್ತರ ಅಂಬೋಣವಾಗಿದೆ. ಏನಾಗಬೇಕಿತ್ತು. ಅದು ಆಗಿ ಹೋಗಿದೆ ಇದು ವಿಚಿತ್ರ ಹುಂಬತನ ಮತ್ತು ಅಧರ್ಮವಾಗಿದೆ ಅವರು ಈ ಸಾನಿಧ್ಯವನ್ನು ಹೇಗೆ ಮತ್ತು ಎಲ್ಲಿ ಅಡಗಿಸಲು ಸಾಧ್ಯ. ಮೊದಲಿನ ಭವಿಷ್ಯವಾಣಿ ಎರಡು ಸ್ತರವನ್ನು ಒಳಗೊಂಡಿತ್ತು. ಇದೀಗ ಒಂದೇ ಸ್ತರವನ್ನು ಆಧಾರವಾಗಿಟ್ಟುಕೊಂಡರೆ ಅದಕ್ಕಿಂತ ದೊಡ್ಡ ಅವಿಶ್ವಾಸ ಇನ್ನಾವುದಿದೆ. ಎರಡನೆ ಅಂತಸ್ತಿನ ಪರೀಕ್ಷೆಯ ಕಾರಣ ಅದು ದೈವಿಕವಿಧಿಯಾಗಿದೆ. ಅವನು ನನ್ನ ಮೇಲೆ ಪ್ರಕಟಪಡಿಸಿರುವನು. ಅಂದರೆ ನೀವು ಮರಣ ಶಿಕ್ಷೆ ಬಯಸಿ ಆಣೆವಹಿಸಬೇಕು ಈಗ ನೀವು ಆಣೆವಹಿಸಲಿಲ್ಲ ಎಂದಾದರೆ ಹೀಗೆಯೇ ಬಾಯಿಮಾತುಗಳಿಂದ ಸುಳ್ಳುಗಾರರ ರೀತಿ ತನ್ನ ಕ್ರೈಸ್ತ ಮತದ ಸತ್ಯ ಬಯಸುವುದಾದರೆ ಇಂತಹ ಹೇಳಿಕೆಗಳೂ ಸಾಕ್ಷ್ಯ ಎನಿಸುವುದಿಲ್ಲ. ಬದಲು ದ್ವೇಷ ಮತ್ತು ಸತ್ಯವನ್ನು ಮರೆಮಾಚುವ ಯತ್ನ ಎನ್ನಲಾಗುತ್ತದೆ. ಅಂದ ಹಾಗೆ ನೀವು ಸತ್ಯವಂತರಾದರೆ ನಿಮಗೆ ಆ ಪವಿತ್ರವಾದ ದೇವನ ಆಣೆವಹಿಸಿ ಹೇಳುತ್ತೇನೆ. ನೀವು ಅವಶ್ಯವಾಗಿ ತಾರೀಖು ನಿಗದಿಪಡಿಸಿ ಸಾರ್ವಜನಿಕ ಸಾಮಾನ್ಯ ಸಭೆ ಅಥವಾ ವಿಶೇಷ ಸಭೆಯಲ್ಲಿ ಮೇಲೆ ವಿವರಿಸಿದಂತೆ ಮರಣ ಶಿಕ್ಷೆಯನ್ನು ಬಯಸುತ್ತಾ ಆಣೆವಹಿಸಬೇಕು ಅದರಿಂದ ಸತ್ಯ ಮತ್ತು ನಿಷ್ಠೆಯ ತೀರ್ಪು ಅಲ್ಲಾಹನಿಂದ ಪ್ರಕಟವಾಗುವುದು. ಅವರು ಬರೆಯುತ್ತಾರೆ ಸುಮಾರು 70 ವರ್ಷದವನಾಗಿದ್ದೇನೆ ಇದಕ್ಕಿಂತ ಮುಂಚೆ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ದುಃಖಕರ! ಉತ್ತಮ ಭಾಗವನ್ನು ನನಗೆ ಇರಿಸಿಕೊಂಡು ರದ್ದಿ ಭಾಗವನ್ನು ಜನರಿಗೆ ತಿನ್ನಿಸಿದರೆ ನಾನು ಎಷ್ಟು ನೀಚ ಮೇಲ್ನೋಟಗಾರನಾಗುವೆನು. ಈ ಆಹಾರವನ್ನು ಇಲ್ಲಿಂದ ತೆಗೆದುಕೊಂಡು ಹೋಗಿರಿ ಬೇರೆ ಆಹಾರ ತೆಗೆದುಕೊಂಡು ಬನ್ನಿ. (ಹಝ್ರತ್ ಉಮರ್(ರ))

ಪ್ರವಾದಿ(ಸ) ರ ನಿರ್ದೇಶನದ ಮೇರೆಗೆ ಯೆಮನ್‌ನಿಂದ ಯಹೂದಿಗಳು ಮತ್ತು ಕ್ರೈಸ್ತರನ್ನು ಹೊರಹಾಕಿದಾಗ ಹಝ್ರತ್ ಉಮರ್(ರ) ಕುರಿತಾದ ಒಂದು ವರದಿಯ ಪ್ರಕಾರ, ಅವರು ತಮ್ಮ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳದೆ ಅವರ ಜಮೀನುಗಳನ್ನು ಖರೀದಿಸಿದರು.

ಹಝ್ರ್.ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಹಿಜರೀ 70ರಲ್ಲಿ ಮಸ್ಜಿದ್ ನಬವಿಯನ್ನು ವಿಸ್ತೀರ್ಣಗೊಳಿಸಲಾಯಿತು, ಜನಗಣತಿ ಆರಂಭಿಸಲಾಗಿತ್ತು, ರಾಶನಿಂಗ್ ಅಥವಾ ಪಡಿತರ ವ್ಯವಸ್ಥೆ ಶುರುಮಾಡಿದರು, ಶೂರಾ ಎಂದರೆ, ಸಮಾಲೋಚನೆ ಸಮಿತಿಯನ್ನು ಸ್ಥಾಪಿಸಲಾಯಿತು, ಭೂ ತೆರಿಗೆಯ ಕಾನೂನನ್ನು ಸರಿಪಡಿಸಿಕೊಂಡು ವಸೂಲು ಮಾಡುವ ರೀತಿಯನ್ನು ಬಹಳ ಸುಗಮಗೊಳಿಸಿದರು.

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರ್.ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಬ್ದುಲ್ಲಾಹ್ ಬಿನ್ ಇಬ್ರಾಹೀಮ್‌ರಿಂದ ಹೀಗೆ ವರದಿಯಾಗಿದೆ: ಮೊಟ್ಟಮೊದಲು ಮಸ್ಜಿದ್ ನಬವಿಯಲ್ಲಿ ಚಾಪೆಗಳನ್ನು ಹಾಸಿದ್ದು ಹಝ್ರ್.ರತ್ ಉಮರ್ ಬಿನ್ ಖತ್ತಾಬ್(ರ) ಆಗಿದ್ದರು.

ಬರಗಾಲದ ದಿನಗಳಲ್ಲಿ ಹಝ್ರ್.ರತ್ ಉಮರ್(ರ) ಒಂದು ಹೊಸ ಕೆಲಸ ಶುರುಮಾಡಿದ್ದರು. ಮೊದಲು ಹೀಗೆ ಮಾಡುತ್ತಿರಲಿಲ್ಲ. ಅದೇನೆಂದರೆ, ಇಶಾ ನಮಾಝಿನ ನಂತರ ತನ್ನ ಮನೆಗೆ ಪ್ರವೇಶಿಸುತ್ತಿದ್ದರು. ತಡರಾತ್ರಿಯ ತನಕ ಹಝ್ರ್.ರತ್ ಉಮರ್(ರ) ನಿರಂತರವಾಗಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಅವರು ಹೊರಗೆ ಬರುತ್ತಿದ್ದರು. ಮದೀನದ ಪರಿಸರ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದರು.

ಇಸ್ಲಾಮಿನ ಪ್ರಕಾರ ಪ್ರತಿಯೊಂದು ವ್ಯಕ್ತಿಗೆ ಊಟ, ವಸತಿ ಮತ್ತು ಬಟ್ಟೆಯನ್ನು ಒದಗಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ಈ ಕಾನೂನನ್ನು ಮೊದಲು ಜಾರಿಗೊಳಿಸಿದ್ದು ಇಸ್ಲಾಮೇ ಆಗಿತ್ತು.

ಅಬ್ದುರ್ರಹ್ಮಾನ್ ಹೇಳಿದರು: ನನ್ನ ವಯಸ್ಸೇ? ನನ್ನ ವಯಸ್ಸನ್ನು ನೀವು ಹೀಗೆ ಅಂದಾಜು ಮಾಡಬಹುದು. ಹಝ್ರ್.ರತ್ ಪೈಗಂಬರ್(ಸ) ಉಸಾಮ ಬಿನ್ ಝೈದ್‌ರನ್ನು ಹತ್ತು ಸಾವಿರ ಸಹಾಬರ ನೇತಾರರನ್ನಾಗಿ ಮಾಡಿಕೊಂಡು ಕಳುಹಿಸಿದಾಗ ಆ ಸಮಯದಲ್ಲಿ ಉಸಾಮ ಬಿನ್ ಝೈದ್‌ರ ವಯಸ್ಸು ಎಷ್ಟಿತ್ತೋ ಅದಕ್ಕಿಂತ ನನ್ನ ವಯಸ್ಸು ಒಂದು ವರ್ಷ ಹೆಚ್ಚಿಗೆ ಇದೆ.

ಒಂದು ಘೋಷಣೆ ಮಡಲಾಯಿತು ಅದೇನಂದರೆ ಅಹ್ಮದಿಯಾ ಎನ್ಸೈಕ್ಲೋಪೀಡಿಯ ತಯಾರಿಸಲಾಗಿದೆ. ಈ ವೆಬ್‌ಸೈಟನ್ನು ಆರ್ಕೈವ್ ಮತ್ತು ರಿಸರ್ಚ್ ಸೆಂಟರ್‌ನ ಕೇಂದ್ರ ವಿಭಾಗ ತಯಾರಿಸಿದೆ. ಇದರಲ್ಲಿ ಸೇರ್ಚ್ ಇಂಜಿನಿನ ಶೈಲಿಯಲ್ಲಿ ಜಮಾಅತಿನ ಪುಸ್ತಕಗಳು, ವ್ಯಕ್ತಿಗಳು, ಘಟನೆಗಳು, ಅಧ್ಯಾಪನೆಗಳು ಮತ್ತು ಕಟ್ಟಡಗಳಿಗೆ ಸಂಬಂಧಿಸಿದ ವಿಷಯಗಳನ್ನು ಶೋಧಿಸಬಹುದಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-07-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇತ್ತೀಚಿನ ದಿನಗಳಲ್ಲಿ, ಹಝ್ರತ್ ಉಮರ್(ರ.ಅ) ರ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ, ನಾನು ಇಂದು ವಿವರಿಸುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಪ್ರವಾದಿ(ಸ) ರ ನಿರ್ದೇಶನದ ಮೇರೆಗೆ ಯೆಮನ್‌ನಿಂದ ಯಹೂದಿಗಳು ಮತ್ತು ಕ್ರೈಸ್ತರನ್ನು ಹೊರಹಾಕಿದಾಗ ಹಝ್ರತ್ ಉಮರ್(ರ) ಕುರಿತಾದ ಒಂದು ವರದಿಯ ಪ್ರಕಾರ, ಅವರು ತಮ್ಮ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳದೆ ಅವರ ಜಮೀನುಗಳನ್ನು ಖರೀದಿಸಿದರು. ಕ್ರೈಸ್ತರ ಮತ್ತು ಯಹೂದಿಗಳ ಅಡಿಯಲ್ಲಿದ್ದ ಯೆಮೆನ್‌ನ ಭೂಮಿಯು ತೆರಿಗೆಯ ಭೂಮಿಯಾಗಿತ್ತು ಆದರೆ ಹಝ್ರತ್ ಉಮರ್(ರ) ಆ ಭೂಮಿಯನ್ನು ಯಹೂದಿಗಳು ಮತ್ತು ಕ್ರೈಸ್ತರಿಂದ ತೆಗೆದುಕೊಂಡು ಅವರನ್ನು ಅರೇಬಿಯದಿಂದ ಹೊರಹಾಕಿದರು. ಆ ಭೂಮಿಯು ತೆರಿಗೆಯ ಭೂಮಿಯಾಗಿದ್ದರಿಂದ ನಿಯಮಾನುಸಾರ ಸರ್ಕಾರ ಆ ಭೂಮಿಯ ಮಾಲಿಕರೆಂದು ಪಡಿಗಣಿಸಲಾಗುತ್ತದೆ ಆದರೂ ಹಝ್ರತ್ ಉಮರ್(ರ)ರವರು ಆ ಭೂಮಿಯನ್ನು ಅವರಿಂದ ಕಸಿದುಕೊಳ್ಳಲಿಲ್ಲ ಅದನ್ನು ಖರೀದಿಸಿದರು. ಆದ್ದರಿಂದ, ಯಾಹ್ಯಾ ಇಬ್ನ್ ಸಈದ್ ಹೇಳಿದ್ದನ್ನು ಫತಹ್ ಅಲ್-ಬಾರಿಯಲ್ಲಿ ವಿವರಿಸಲಾಗಿದೆ: ಅಂದರೆ, ಹಝ್ರತ್ ಉಮರ್ ನಜ್ರಾನ್‌ನ ಮುಶ್ರಿಕ್‌ಗಳಿಗೆ ಮತ್ತು ಯಹೂದಿಗಳಿಗೆ ಹಾಗೂ ಕ್ರೈಸ್ತರನ್ನು ಅಲ್ಲಿಂದ ಗಡೀಪಾರು ಮಾಡಿ ಅವರ ಜಮೀನು ಮತ್ತು ತೋಟಗಳನ್ನು ಖರೀದಿಸಿದರು ಎಂದು ಯಾಹ್ಯಾ ಇಬ್ನ್ ಸಯೀದ್ ವಿವರಿಸಿದ್ದಾರೆ. ನಿಸ್ಸಂಶಯವಾಗಿ, ಯಹೂದಿಗಳ ಭೂಮಿ ದಶಾಂಶವಾಗಲು ಸಾಧ್ಯವಿಲ್ಲ, ಏಕೆಂದರೆ ಅದು ದಶಾಂಶವಾಗಿದ್ದರೆ ಅದರ ಮಾಲೀಕರು ಮುಸ್ಲಿಮರಾಗುತ್ತಾರೆ. ಆದ್ದರಿಂದ ಯಹೂದಿಗಳು ಅದನ್ನು ಖರೀದಿಸುವ ಪ್ರಶ್ನೆಯೇ ಇರಲಿಲ್ಲ. ಇದು ಖಂಡಿತವಾಗಿಯೂ ಒಂದು ತೆರಿಗೆ, ಭಾರತದ ಭೂಮಿಯನ್ನು ಖರಾಜಿ(ತೆರಿಗೆ) ಎಂದು ಕರೆಯಲಾಗುತ್ತದೆ, ಆದರೆ ಹಝ್ರತ್ ಉಮರ್ ಅದನ್ನು ಖರಾಜಿ(ತೆರಿಗೆಯ ಭೂಮಿ) ಎಂದು ಘೋಷಿಸಿ ಸರ್ಕಾರವನ್ನು ಅದರ ಮಾಲೀಕ ಎಂದು ಘೋಷಿಸುವ ಮೂಲಕ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಿಲ್ಲ, ಆದರೆ ಅದನ್ನು ಖರೀದಿಸಿದರು. ಯಾರಾದರು ಈ ಭೂಮಿಯನ್ನು ಖರಾಜಿ ಅಥವಾ ದಶಾಂಶವಾಗುವುದಿಲ್ಲ ಬದಲಿಗೆ ಬೇರೆಯದ್ದಾಗುತ್ತದೆ ಎಂದು ಹೇಳಿದರೆ, ಈ ಕಲ್ಪನೆಯು ಅಸಂಬದ್ಧವಾಗಿರುತ್ತದೆ ಮತ್ತು ಇಸ್ಲಾಮಿಕ್ ಕಾನೂನಿನ ಅಜ್ಞಾನದ ಸಂಕೇತವಾಗುತ್ತದೆ. ಇಸ್ಲಾಮಿನಲ್ಲಿ ದಶಾಂಶ ಮತ್ತು ತೆರಿಗೆಯನ್ನು ಹೊರತುಪಡಿಸಿ ಬೇರೆ ಯಾವುದೇ ಭೂಮಿ ಇಲ್ಲ. ಆದ್ದರಿಂದ, ನಿಸ್ಸಂದೇಹವಾಗಿ ಯಹೂದಿಯರು, ಕ್ರೈಸ್ತರು ಮತ್ತು ನಜ್ರಾನ್‌ನ ಮುಶ್ರಿಕರ ಭೂಮಿಗಳು ಖರಾಜಿ (ತೆರಿಗೆಯ) ಜಮೀನುಗಳಾಗಿದ್ದವು ಇಲ್ಲದಿದ್ದರೆ ಅವು ಉಶ್ರಿ(ದಶಾಂಶ)ವಾಗಿತ್ತು ಆದರೆ ಎರಡೂ ಸಂದರ್ಭಗಳಲ್ಲಿ ಅವರ ಮಾಲೀಕ ಹಝ್ರತ್ ಉಮರ್(ರ) ಅದರ ಆಕ್ರಮಣಕಾರರದ್ದು ಎಂದು ಘೋಷಿಸಿದರು ಮತ್ತು ಆ ಭೂಮಿಯನ್ನು ಅವರಿಂದ ಖರೀದಿಸಲಾಯಿತು. (ಇಸ್ಲಾಮ್ ಔರ್ ಮಾಲಿಕಿಯ್ಯತ್ ಝಮೀನ್, ಅನ್ವಾರುಲ್ ಉಲೂಮ್, ಸಂಪುಟ-21, ಪುಟ-444, 478-479)

ಇಸ್ಲಾಮಿನಲ್ಲಿ ಯುದ್ಧಕೈದಿಗಳನ್ನು ಹೊರತುಪಡಿಸಿ ಇತರರನ್ನು ಗುಲಾಮರನ್ನಾಗಿ ಮಾಡುವುದನ್ನು ನಿಷೇಧಿಸಲಾದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ್.ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಹೇಳುತ್ತಾನೆ: "ಎಲೈ ಮುಸ್ಲಿಮರೇ, ಇತರ ಜನರು ಮಾಡುವ ರೀತಿಯಲ್ಲಿ ಅನ್ಯ ಸಮುದಾಯಗಳ ಜನರನ್ನು ಸೆರೆಹಿಡಿದುಕೊಂಡು ತಮ್ಮ ಶಕ್ತಿಯನ್ನು

ವರ್ಧಿಸಲು ನೀವು ಬಯಸುತ್ತೀರಾ? ಹಾಗೆ ಮಾಡುವುದನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಬದಲಾಗಿ ಪರಿಣಾಮದ ದೃಷ್ಟಿಯಲ್ಲಿ ನಿಮಗೆ ಉತ್ತಮವಾಗಿರುವಂತಹ ಆಜ್ಞೆಗಳ ಪ್ರಕಾರ ನಿಮ್ಮನ್ನು ನಡೆಸಲು ಅವನು ಬಯಸುತ್ತಾನೆ. ಆದ್ದರಿಂದ ಯುದ್ಧದ ವೇಳೆ ಬಂಧಿಸಲಾಗುವ ಯುದ್ಧ ಕೈದಿಯಗಳನ್ನಲ್ಲದೆ ಬೇರೆ ಯಾರನ್ನೂ ಕೈದಿಯನ್ನಾಗಿ ಮಾಡಬೇಡಿರಿ." ಇಸ್ಲಾಮಿನ ಆರಂಭ ಕಾಲದಲ್ಲಿ ಈ ಆದೇಶವನ್ನು ಕಟ್ಟುನಟ್ಟಾಗಿ ಪಾಲಿಸಲಾಗುತ್ತಿತ್ತು. ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಯಮನಿನಿಂದ ಒಂದು ಸಂಘ ಬಂದಿತು. ಇಸ್ಲಾಮಿಗೆ ಮುಂಚೆ ಕ್ರೈಸ್ತರು ಅವರನ್ನು ಯುದ್ಧ ಮಾಡದೇ ವಿನಾ ಕಾರಣ ಒತ್ತಾಯ ಪೂರ್ವಕವಾಗಿ ಗುಲಾಮರನ್ನಾಗಿ ಮಾಡಿದ್ದರು ಎಂದು ಆ ಸಂಘದವರು ದೂರಿದರು. ಹಝ್ರತ್ ಉಮರ್(ರ) ಹೇಳಿದರು: ಇದು ಇಸ್ಲಾಮಿಗೆ ಮೊದಲಿನ ಘಟನೆಯಾಗಿದೆ. ಆದರೂ ನಾನು ಅದರ ಬಗ್ಗೆ ಅನ್ವೇಷಣೆ ನಡೆಸುವೆನು. ನಿಮ್ಮ ಮಾತು ಸರಿಯೆಂದು ಸಾಬೀತಾದರೆ ನಿಮ್ಮನ್ನು ತಕ್ಷಣವೇ ಸ್ವತಂತ್ರಗೊಳಿಸುವೆನು. ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಇಂದಿನ ಯುರೋಪಿಗೆ ಹೋಲಿಸಿ ಹೀಗೆ ಹೇಳುತ್ತಿದ್ದಾರೆ: ಇದಕ್ಕೆ ವಿರುದ್ಧವಾಗಿ ಯೂರೋಪಿನಲ್ಲಿ ಏನಾಯಿತು? ಅವರು ಅವರ ವ್ಯಾಪಾರಗಳು ಮತ್ತು ಕೃಷಿಗಳನ್ನು ಅಭಿವೃದ್ಧಿಗೊಳಿಸಲು ಹತ್ತೊಂಬತನೇ ಶತಮಾನದ ತನಕ ಗುಲಾಮಗಿರಿ ಸಂಪ್ರದಾಯವನ್ನು ಜಾರಿಯಲ್ಲಿರಿಸಿದರು. ಇಸ್ಲಾಮಿನ ಚರಿತ್ರೆಯಿಂದ ಒಂದು ಇಸ್ಲಾಮೇತರ ಗುಲಾಮಗಿರಿಯ ಕುರುಹು ಲಭಿಸುತ್ತದೆ. ಆದರೂ ಗುಲಾಮರ ಮೂಲಕ ರಾಷ್ಟ್ರೀಯವಾಗಿ ವ್ಯಾಪಾರದ ಅಭಿವೃದ್ಧಿ ಮಾಡಿದ್ದಾಗಿ ಎಲ್ಲೂ ಕಾಣಲು ಸಾಧ್ಯವಲ್ಲ. (ಇಸ್ಲಾಮ್ ಮೇ ಇಖ್ತೆಲಾಫಾತ್ ಕಾ ಆಘಾಝ್, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–26–27) ಇಸ್ಲಾಮಿನಲ್ಲಿ ಈ ರೀತಿಯ ಯಾವುದೇ ಗುಲಾಮ ಸಂಪ್ರದಾಯವಿಲ್ಲ.

ಹಿಜರೀ 18ರಲ್ಲಿ ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಮದೀನ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಠಿಣವಾದ ಬರಗಾಲ ಬಂದಿತ್ತು. ಜೋರಾಗಿ ಬಿರುಗಾಳಿ ಬೀಸುವಾಗ ಮಣ್ಣು ಬೂದಿಯಂತೆ ಹಾರಾಡುತ್ತಿತ್ತು. ಆದ ಕಾರಣದಿಂದ ಆ ವರ್ಷವನ್ನು **ಆಮುರ್‍ರಿಮಾದ್** ಎಂದರೆ, ಬೂದಿಯ ವರ್ಷವೆಂದು ಹೇಳಲಾಗುತ್ತದೆ. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–508, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಔಫ್ ಬಿನ್ ಹಾರಿಸ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಆ ವರ್ಷವನ್ನು **ಆಮುರ್‍ರಿಮಾದ್** ಎಂದರೆ, ಬೂದಿಯ ವರ್ಷವೆಂದು ಹೇಳಲಾಗುತ್ತದೆ. ಮಳೆಯಿಲ್ಲದ ಕಾರಣದಿಂದ ಭೂಪ್ರದೇಶವೆಲ್ಲ ಕಪ್ಪು ಬೂದಿಯಂತೆ ಆಗಿತ್ತು. ಈ ಅವಸ್ಥೆ ಒಂಬತ್ತು ತಿಂಗಳುಗಳಷ್ಟು ಕಾಲ ಜಾರಿಯಲ್ಲಿತ್ತು. ಹಝ್ಝಾಮ್ ಬಿನ್ ಹಿಶಾಂ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಿಜರಿ 18ರಲ್ಲಿ ಜನರು ಹಜ್ಜಿನಿಂದ ಮರಳಿ ಬಂದಾಗ ಅವರಿಗೆ ಕಠಿಣವಾದ ಕಷ್ಟತೆಯುಂಟಾಯಿತು. ದೇಶದೆಲ್ಲಡೆ ವರ್ಷಪೂರ್ತಿ ಬರಗಾಲ ಉಂಟಾಯಿತು. ಜಾನುವಾರುಗಳು ನಾಶವಾದುವು. ಜನರು ಹಸಿವೆಯಿಂದ ಸಾಯುತ್ತಿದ್ದರು. ಎಲ್ಲಿಯ ವರೆಗೆ ಎಂದರೆ ಜನರು ಒಣ ಎಲುಬುಗಳನ್ನು ಪುಡಿ ಮಾಡಿಕೊಂಡು ಅದನ್ನು ನೀರಲ್ಲಿ ಹಾಕಿಕೊಂಡು ಕುಡಿಯಲು ಶುರುಮಾಡಿದರು. ಇಂತಹ ಪರಿಸ್ಥಿತಿಯಲ್ಲಿ ಈಜಿಪ್ಟಿನ ಅಧಿಕಾರಿಯಾಗಿದ್ದ ಅಮ್ರ್ ಬಿನ್ ಅಲ್‌ಆಸ್‌ರಿಗೆ ಸಹಾಯಕ್ಕಾಗಿ ಹಝ್ರತ್ ಉಮರ್(ರ) ಹೀಗೆ ಪತ್ರ ಬರೆದರು:

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಅಲ್ಲಾಹನ ದಾಸನಾದ ಉಮರ್, ಅಮೀರುಲ್ ಮೂಮಿನೀನ್ ಕಡೆಯಿಂದ ಅಮ್ರ್ ಬಿನ್ ಅಲ್‌ಆಸ್‌ರ ಹೆಸರಲ್ಲಿ. ನಿಮ್ಮ ಮೇಲೆ ಶಾಂತಿ ಇರಲಿ. ಅಮ್ಮಾ ಬಾದ್. ನೀನು ನನ್ನನ್ನು ಮತ್ತು ನನ್ನ ಬಳಿಯಲ್ಲಿ ಇರುವ ಜನರನ್ನು ಸಾಯುವುದಾಗಿ ಕಾಣಲು ಬಯಸುತ್ತೀಯಾ? ನೀನು ಜೀವಂತವಾಗಿದ್ದೀಯ ಮತ್ತು ನಿನ್ನ ಬಳಿಯಲ್ಲಿ ಇರುವ ಜನರು ಸಹ ಜೀವಂತವಾಗಿರುವರು. ಯಾರಾದರೂ ಸಹಾಯ ಮಾಡುವವರು ಇದ್ದಾರೆಯೇ? ಸಹಾಯ ಸಹಾಯ ಸಹಾಯ.

ಇದಕ್ಕೆ ಉತ್ತರವಾಗಿ ಹಝ್ರತ್ ಅಮ್ರ್ ಬಿನ್ ಆಸ್ ಹೀಗೆ ಬರೆದರು:

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲ. ಅಮ್ಮಾ ಬಾದ್. ನಿಮ್ಮ ಬಳಿಗೆ ಸಹಾಯ ತಲುಪುತ್ತಿದೆ. ಸ್ವಲ್ಪ ಸಮಯ ಕಾಯಿರಿ. ನಾನು ನಿಮ್ಮ ಕಡೆಗೆ ಒಂಟೆಯ ಒಂದು ದಂಡನ್ನು ಕಳುಹಿಸುತ್ತಿದ್ದೇನೆ. ಆದರೆ ಮೊದಲ ಒಂಟೆ ನಿಮ್ಮ ಬಳಿಯಲ್ಲಿರುವುದು ಮತ್ತು ಅದರ ಕೊನೆಯ ಒಂಟೆ ನನ್ನ ಬಳಿಯಲ್ಲಿರುವುದು. ಎಂದರೆ ಅದು ಬಹಳ ಉದ್ದದ ಒಂಟೆಗಳ ಸಾಲಾಗಿತ್ತು.

ದವಸಧಾನ್ಯಗಳನ್ನು ಒಳಗೊಂಡ ಒಂದು ಸಾವಿರ ಒಂಟೆಗಳನ್ನು ಈಜಿಪ್ಟಿನ ಅಧಿಕಾರಿಯಾಗಿದ್ದ ಹಝ್ರತ್ ಅಮ್ರ್ ಬಿನ್ ಅಲ್‌ಆಸ್ ಕಳುಹಿಸಿದರು. ತುಪ್ಪ ಮತ್ತು ಬಟ್ಟೆಗಳು ಇದಕ್ಕೆ ಹೊರತಾಗಿತ್ತು. ದವಸಧಾನ್ಯಗಳನ್ನು ಒಳಗೊಂಡ ಮೊದಲ ಹಿಂಡು ಬಂದಾಗ, ಹಝ್ರತ್ ಉಮರ್(ರ) ಹಝ್ರತ್ ಝುಬೇರ್ ಬಿನ್ ಅವಾಮ್‌ರೊಡನೆ ಹೇಳಿದರು: ನೀನು ಸಂಘವನ್ನು ತಡೆದುಕೊಂಡು ಅದನ್ನು ಗ್ರಾಮ ಪ್ರದೇಶಗಳ ಕಡೆಗೆ ತಿರುಗಿಸು. ಅವರಿಗೆ ಮೊದಲು ಕೊಡು. ಇರಾಕಿನ ಅಧಿಕಾರಿಯಾಗಿದ್ದ ಹಝ್ರತ್ ಸಅದ್(ರ) ದವಸಧಾನ್ಯಗಳನ್ನು ಒಳಗೊಂಡು ಮೂರು ಸಾವಿರ ಒಂಟೆಗಳನ್ನು ಕಳುಹಿಸಿದರು. ಅವುಗಳನ್ನು ಹಝ್ರತ್ ಉಮರ್(ರ) ಗ್ರಾಮಪ್ರದೇಶಗಳಿಗೆ ಕಳುಹಿಸಿದರು. ಈ ಕಠಿಣವಾದ ದಿನಗಳಲ್ಲಿ ಹಝ್ರತ್ ಉಮರ್(ರ) ತನ್ನ ಮೇಲ್ನೋಟದಲ್ಲಿ ಊಟವನ್ನು ತಯಾರು ಮಾಡಿಸುತ್ತಿದ್ದರು, ಜನರೊಂದಿಗೆ ಸೇರಿಕೊಂಡು ಊಟ ಸೇವಿಸುತ್ತಿದ್ದರು ಮತ್ತು ನಿರಂತರವಾಗಿ ಉಪವಾಸವನ್ನು ಅನುಷ್ಠಿಸುತ್ತಿದ್ದರು.

ಅಬ್ದುಲ್ಲಾ ಬಿನ್ ಝೈದ್ ಬಿನ್ ಅಸ್ಲಮ್ ಅವರು ವರದಿ ಮಾಡುತ್ತಾರೆ ಹಝ್ರತ್ ಉಮರ್(ರ) ನರಂತರವಾಗಿ ಉಪವಾಸವನ್ನು ಅನುಷ್ಠಿಸುತ್ತಿದ್ದರು. ಆಮುರ್‍ರಿಮಾದ್‌ನ ಕಾಲದಲ್ಲಿ ಒಂದು ದಿನ ಒಂಟೆಯನ್ನು ಕೊಯ್ಯಲಾದಾಗ, ಸಂಜೆ ಸಮಯದಲ್ಲಿ ಹಝ್ರತ್ ಉಮರರ(ರ) ಸನ್ನಿಧಿಯಲ್ಲಿ ಒಂಟೆಯ ಡುಬ್ಬ ಮತ್ತು ಕಲಿಜದ ತುಣುಕುಗಳನ್ನು ಇರಿಸಲಾಯಿತು. ಇದು ಎಲ್ಲಿಂದ ಬಂತು ಎಂದು ಹಝ್ರತ್ ಉಮರ್(ರ) ಕೇಳಿದರು. ಇಂದು ಕೊಯ್ಯಲಾದ ಒಂಟೆಗಳಿಂದ ಇವು ಲಭಿಸಿದ್ದುವು ಎಂದು ಅವರೊಡನೆ ಹೇಳಲಾಯಿತು. ಹಝ್ರತ್ ಉಮರ್(ರ) ಹೇಳಿದರು: ದುಃಖಕರ! ಉತ್ತಮ ಭಾಗವನ್ನು ನನಗೆ ಇರಿಸಿಕೊಂಡು ರದ್ದಿ ಭಾಗವನ್ನು ಜನರಿಗೆ ತಿನ್ನಿಸಿದರೆ ನಾನು ಎಷ್ಟು ನೀಚ ಮೇಲ್ನೋಟಗಾರನಾಗುವೆನು. ಈ ಆಹಾರವನ್ನು ಇಲ್ಲಿಂದ ತೆಗೆದುಕೊಂಡು ಹೋಗಿರಿ. ಹೀಗೆ ಅವರಿಗಾಗಿ ರೊಟ್ಟಿ ಮತ್ತು ಒಲಿವ್ ಎಣ್ಣೆಯನ್ನು ತರಲಾಯಿತು. ಅದರಿಂದ ಸರೀದ್ ತಯಾರಿಸಿದರು. ಅನಂತರ ತನ್ನ ಗುಲಾಮನೊಡನೆ ಹೇಳಿದರು: ಹೇ ಯರ್‌ಫಅ್, ನಿನಗೆ ಒಳ್ಳೆಯದಾಗಲಿ. ಈ ಬಟ್ಟಲನ್ನು ಸಮಕಿನಲ್ಲಿರುವ ಮನೆಯವರಿಗೆ ಕೊಡು. ಸಮಕ್ ಸಹ ಮದೀನದ ಬಳಿಯಿದ್ದ ಖರ್ಜೂರದ ಒಂದು ತೋಟವಾಗಿತ್ತು. ಅದರ ಮಾಲಿಕ ಹಝ್ರತ್ ಉಮರ್(ರ) ಆಗಿದ್ದರು. ಅವರು ಆ ತೋಟವನ್ನು ವಖ್ಫ್ ಮಾಡಿದ್ದರು. ಹಝ್ರತ್ ಉಮರ್(ರ) ಹೇಳಿದರು: ಮೂರು ದಿನಗಳಿಂದ ನಾನು ಅವರಿಗೆ ಏನೂ ನೀಡಿಲ್ಲ. ಅವರು ಹಸಿವಿನಿಂದ ಇರಬಹುದು ಎಂದು ನನಗೆ ತೋರುತ್ತದೆ. ಇದನ್ನು ಅವರಿಗೆ ಕೊಟ್ಟು ಬಾ.

ಹಝ್ರತ್ ಇಬ್ನ್ ಉಮರ್(ರ) ವರದಿ ಮಾಡುತ್ತಾರೆ: ಬರಗಾಲದ ದಿನಗಳಲ್ಲಿ ಹಝ್ರತ್ ಉಮರ್(ರ) ಒಂದು ಹೊಸ ಕೆಲಸ ಶುರುಮಾಡಿದ್ದರು. ಮೊದಲು ಹೀಗೆ ಮಾಡುತ್ತಿರಲಿಲ್ಲ. ಅದೇನೆಂದರೆ, ಇಶಾ ನಮಾಝಿನ ನಂತರ ತನ್ನ ಮನೆಗೆ ಪ್ರವೇಶಿಸುತ್ತಿದ್ದರು. ತಡರಾತ್ರಿಯ ತನಕ ಹಝ್ರತ್ ಉಮರ್(ರ) ನಿರಂತರವಾಗಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಅವರು ಹೊರಗೆ ಬರುತ್ತಿದ್ದರು. ಮದೀನದ ಪರಿಸರ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದರು. ಒಂದು ರಾತ್ರಿ ಸಹರಿಯ ಸಮಯದಲ್ಲಿ ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡುತ್ತಿರುವುದಾಗಿ ನಾನು ಕಂಡೆನು: "ಹೇ ಅಲ್ಲಾಹ್, ನನ್ನ ಕೈಗಳಿಂದ ಹಝ್ರತ್ ಪೈಗಂಬರರ(ಸ) ಉಮ್ಮತ್ತನ್ನು ನಾಶಕ್ಕೆ ನೂಕಬೇಡ."

ಮುಹಮ್ಮದ್ ಬಿನ್ ಯಹ್ಯಾ ಬಿನ್ ಹಬ್ಬಾನ್ ವರದಿ ಮಾಡುತ್ತಾರೆ: ಬರಗಾಲದ ದಿನಗಳಲ್ಲಿ ಹಝ್ರತ್ ಉಮರರ ಬಳಿಗೆ ಕೊಬ್ಬಿನಲ್ಲಿ ಮುಳುಗಿಸಲಾದ ರೊಟ್ಟಿ ತರಲಾಯಿತು. ಹಝ್ರತ್ ಉಮರ್(ರ) ಒಬ್ಬ ಬದವಿಯನ್ನು ತನ್ನ ಸಮೀಪಕ್ಕೆ ಕರೆದರು. ಅವರೊಂದಿಗೆ ಕುಳಿತುಕೊಂಡು ಊಟ ಮಾಡಲು ಶುರುಮಾಡಿದರು. ಅವನು ಬೇಗಬೇಗನೇ ಬಟ್ಟಲಿನ ಬದಿಯಿಂದ ಕೊಬ್ಬನ್ನು ತೆಗೆದುಕೊಂಡು ತಿನ್ನಲು ಶುರುಮಾಡಿದನು. ಆಗ ಹಝ್ರತ್ ಉಮರ್(ರ) ಹೇಳಿದರು: ನೀನು ಕೊಬ್ಬನ್ನು ಇಲ್ಲಿಯ ವರೆಗೆ ನೋಡೇ ಇಲ್ಲವೆಂಬಂತೆ ತಿನ್ನುತ್ತಿದ್ದಿಯಲ್ಲವೇ? ಅವನು ಹೇಳಿದನು: ನಾನು ಹಲವಾರು ದಿನಗಳಿಂದ ತುಪ್ಪ, ಅಥವಾ ಒಲಿವೆಣ್ಣೆ ಸೇವಿಸಿಲ್ಲ. ಬೇರೆ ಯಾರನ್ನೂ ಸೇವಿಸುತ್ತಾ ಕಾಣಲೂ ಇಲ್ಲ. ಇದನ್ನು ಕೇಳಿದಾಗ ಹಝ್ರತ್ ಉಮರ್(ರ) ಆಣೆ ಹಾಕಿಕೊಂಡು ಹೀಗೆ ಹೇಳಿದರು: ಜನರ ಸ್ಥಿತಿ ಉತ್ತಮಗೊಳ್ಳುವ ತನಕ ನಾನು ಮಾಂಸವನ್ನೋ ತುಪ್ಪವನ್ನೋ ಸೇವಿಸುವುದಿಲ್ಲ.

ಇಬ್ನು ತಾವೂಸ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಜನರ ಸ್ಥಿತಿ ಉತ್ತಮಗೊಳ್ಳುವ ತನಕ ಹಝ್ರತ್ ಉಮರ್(ರ) ಮಾಂಸವನ್ನೋ

ತುಪ್ಪವನ್ನೋ ಸೇವಿಸಿರಲಿಲ್ಲ. ತುಪ್ಪ ಇತ್ಯಾದಿಗಳನ್ನು ಸೇವಿಸದ ಕಾರಣದಿಂದ ಮತ್ತು ಕೇವಲ ಎಣ್ಣೆಯನ್ನು ಸೇವಿಸಿದ ಕಾರಣದಿಂದ ಅವರ ಹೊಟ್ಟೆಯಿಂದ ಶಬ್ದ ಬರುತ್ತಿತ್ತು. ಹಝ್ರತ್ ಉಮರ್(ರ) ತನ್ನ ಹೊಟ್ಟೆಯನ್ನು ಸಂಬೋಧಿಸುತ್ತಾ ಹೇಳುತ್ತಿದ್ದರು: ಅಲ್ಲಾಹನಾಣೆ, ಜನರ ಸ್ಥಿತಿ ಉತ್ತಮಗೊಳ್ಳುವ ತನಕ ಅಥವಾ ಮೊದಲಿನಂತೆ ಆಹಾರ ಸೇವಿಸಲು ಶುರುಮಾಡುವ ವರೆಗೆ ನಿನಗೆ ಬೇರೇನು ಲಭಿಸಲಿಕ್ಕಿಲ್ಲ.

ಅಯಾಝ್ ಬಿನ್ ಖಲೀಫ ಹೇಳುತ್ತಾರೆ: ಬರಗಾಲದ ವರ್ಷದಲ್ಲಿ ಹಝ್ರತ್ ಉಮರರ(ರ) ಮೈಬಣ್ಣ ಕಪ್ಪಾಗಿ ಬಿಟ್ಟಿತ್ತು. ಮೊದಲು ಅವರ ಮೈಬಣ್ಣ ಬಿಳಿಯಾಗಿತ್ತು. ಅದು ಹೇಗೆ ಆಯಿತು ಎಂದು ನಾವು ಕೇಳಿದೆವು. ವರದಿಗಾರ ಹೇಳಿದರು: ಹಝ್ರತ್ ಉಮರ್(ರ) ಒಬ್ಬ ಅರೇಬಿಯದ ವ್ಯಕ್ತಿಯಾಗಿರುವರು. ಅವರು ತುಪ್ಪ ಮತ್ತು ಹಾಲನ್ನು ಸೇವಿಸುತ್ತಿದ್ದರು. ಬರಗಾಲ ಬಂದಾಗ ಜನರು ಉತ್ತಮ ಸ್ಥಿತಿಗೆ ತಲುಪುವ ತನಕ ಅವರು ಇವುಗಳನ್ನು ತನ್ನ ಮೇಲೆ ನಿಷಿದ್ಧಗೊಳಿಸಿದರು. ಹಝ್ರತ್ ಉಮರ್(ರ) ಎಣ್ಣೆಯೊಂದಿಗೆ ಊಟ ಮಾಡುತ್ತಿದ್ದರು. ಇದರಿಂದ ಅವರ ಬಣ್ಣ ಬದಲಾಯಿತು. ಅದಲ್ಲದೇ ಹಸಿವಿನಿಂದ ಇರುವುದನ್ನು ಶುರುಮಾಡಿದಾಗ ಮೈಬಣ್ಣ ಇನ್ನೂ ಹೆಚ್ಚು ಬದಲಾಯಿತು.

ಉಸಾಮ ಬಿನ್ ಝೈದ್ ಬಿನ್ ಅಸ್ಲಂ ತನ್ನ ತಾತರಿಂದ ವರದಿ ಮಾಡುತ್ತಾರೆ: ನಾವು ಹೀಗೆ ಹೇಳುತ್ತಿದ್ದುವು: ಅಲ್ಲಾಹನು ಬರಗಾಲವನ್ನು ನೀಗಿಸದಿದ್ದರೆ, ಹಝ್ರತ್ ಉಮರ್(ರ) ಮುಸ್ಲಿಮರ ಚಿಂತೆಯಲ್ಲಿ ಮೃತಪಡುವರು.

ಝೈದ್ ಬಿನ್ ಅಸ್ಲಂ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಬರಗಾಲದ ಕಾಲದಲ್ಲಿ ಅರೇಬಿಯದ ಎಲ್ಲರು ಮದೀನಕ್ಕೆ ಬಂದರು. ಅವರಿಗೆ ಊಟದ ವ್ಯವಸ್ಥೆ ಮಾಡಲು ಹಝ್ರತ್ ಉಮರ್(ರ) ಜನರಿಗೆ ಆದೇಶ ನೀಡಿದರು. ಮದೀನದ ನಾಲ್ಕೂ ಕಡೆಗಳಲ್ಲಿ ಅನೇಕ ಸಹಾಬಿಯರಿಗೆ ಹಝ್ರತ್ ಉಮರ್(ರ) ಡ್ಯೂಟಿ ಕೊಟ್ಟರು. ಬೆಳಿಗ್ಗೆಯಿಂದ ಸಂಜೆಯ ತನಕದ ಪ್ರತಿಯೊಂದು ಕ್ಷಣದ ವಾರ್ತೆಯನ್ನು ಸಂಜೆಯ ಸಮಯದಲ್ಲಿ ಹಝ್ರತ್ ಉಮರ್‌ರಿಗೆ ತಲುಪಿಸಲಾಗುತ್ತಿತ್ತು. ಮದೀನದ ಎಲ್ಲ ಪ್ರದೇಶಗಳಲ್ಲಿ ಮರಳುಗಾಡಿನ ಜನರು ಬಂದಿದ್ದರು. ಒಂದು ರಾತ್ರಿ ಜನರು ಊಟ ಮಾಡಿದ ನಂತರ ಹಝ್ರತ್ ಉಮರ್(ರ) ಹೇಳಿದರು: ನಮ್ಮೊಂದಿಗೆ ಊಟ ಮಾಡಿದ ಜನರು ಎಷ್ಟೆಂದು ಲೆಕ್ಕ ಹಾಕಿರಿ. ಅವರ ಲೆಕ್ಕ ಹಾಕಲಾದಾಗ ಅವರು ಸುಮಾರು ಏಳು ಸಾವಿರದಷ್ಟು ಇತ್ತು. ಹಝ್ರತ್ ಉಮರ್(ರ) ಹೇಳಿದರು: ಬರದೇ ಇದ್ದವರ, ಮಕ್ಕಳ ಮತ್ತು ರೋಗಿಗಳ ಸಹ ಲೆಕ್ಕ ತೆಗೆಯಿರಿ. ಲೆಕ್ಕ ಮಾಡಲಾದಾಗ ಸುಮಾರು ನಲ್ವತ್ತು ಸಾವಿರದಷ್ಟು ಇತ್ತು. ಕೆಲವು ದಿನಗಳ ನಂತರ ಜನರ ಸಂಖ್ಯೆ ಹೆಚ್ಚಿತು. ಪುನಃ ಲೆಕ್ಕ ತೆಗೆಯಲಾದಾಗ, ಹಝ್ರತ್ ಉಮರ್‌ರೊಂದಿಗೆ ಊಟ ಮಾಡಿದವರರ ಸಂಖ್ಯೆ ಹತ್ತು ಸಾವಿರ ಮತ್ತು ಇತರರ ಸಂಖ್ಯೆ ಐವತ್ತು ಸಾವಿರವಾಗಿತ್ತು. ಹೀಗೆ ನಡೆಯುತ್ತಾ ಇತ್ತು. ಅನಂತರ ಅಲ್ಲಾಹನು ಮಳೆಯನ್ನು ವರ್ಷಿಸಿದನು. ಮಳೆ ಬಂದಾಗ ಹಝ್ರತ್ ಉಮರ್(ರ) ಅಧಿಕಾರಿಗಳಿಗೆ ಹೀಗೆ ಆದೇಶ ನೀಡಿದರು: ಜನರೆಲ್ಲರೂ ತಮ್ಮ ತಮ್ಮ ಪ್ರದೇಶಗಳಿಗೆ ಹೋಗಲಿಕ್ಕಾಗಿ ಏರ್ಪಾಡು ಮಾಡಿರಿ. ಅವರಿಗೆ ಧಾನ್ಯ ಮತ್ತು ಸವಾರಿಗಳನ್ನು ಸಹ ಒದಗಿಸಿಕೊಡಿರಿ. ವರದಿಗಾರ ಹೇಳುತ್ತಾರೆ: ಹಝ್ರತ್ ಉಮರ್(ರ) ಸ್ವತಃ ಈ ಜನರನ್ನು ರವಾನೆ ಮಾಡಲು ಹೋಗುತ್ತಿದ್ದರು. (ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-165-169, ದಾರ್ ಅಹ್ಯಾಉತ್ತುರಸುಲ್ ಅರಬಿ ಬೈರೂತ್ 1996) (ಲುಗಾತುಲ್ ಹದೀಸ್, ಸಂಪುಟ-1, ಪುಟ-234, ಸುಮಾನ್ ಕುತುಬ್ ಖಾನ ಲಾಹೋರ್ 2005) (ಫತ್ಹುಲ್ ಬಾರಿ ಶರಹ್ ಸಹೀಹ್ ಅಲ್‌ಬುಖಾರಿ, ಸಂಪುಟ-5, ಪುಟ-460-461, ಹದೀಸ್-2764, ದಾರುರ್‍ರೈಯಾನ್ ಲಿತ್ತುರಾಸುಲ್ ಖಾಹಿರಃ 1986)

ಮೊದಲು ಹಸಿವಿನ ಕಾರಣದಿಂದ ಸುತ್ತುಮುತ್ತಲಿನ ಜನರು ಪಟ್ಟಣಕ್ಕೆ ಬರುತ್ತಿದ್ದರು. ಮಳೆ ಬಂದು ಸ್ಥಿತಿಗತಿಗಳು ಸರಿಯಾದಾಗ, ಕೃಷಿ ಮಾಡುವಂತಾದಾಗ ಹಝ್ರತ್ ಉಮರ್(ರ) ಹೇಳಿದರು: ಮರಳಿಹೋಗಿರಿ. ಪರಿಶ್ರಮಪಟ್ಟುಕೊಂಡು ತಮ್ಮ ಕೃಷಿಭೂಮಿಯನ್ನು ಬೆಳೆಸಿರಿ.

ತಾರೀಖ್ ತಬರಿಯಲ್ಲಿ ಬರಗಾಲ ಕೊನೆಗೊಂಡದ್ದರ ಕುರಿತು ಹೀಗೆ ಬರೆಯಲಾಗಿದೆ: ಬರಗಾಲದ ದಿನಗಳು ಅತಿ ಕಠೋರವಾದಾಗ, ಹಝ್ರತ್ ಪೈಗಂಬರ್(ಸ) ದುಆ ಮಾಡಲು ಗಮನ ಸೆಳೆದದ್ದಾಗಿ ಒಬ್ಬ ವ್ಯಕ್ತಿ ಕನಸು ಕಂಡರು. ಹೀಗೆ ಹಝ್ರತ್ ಉಮರ್(ರ) ಹೇಳಿದರು: ವಿಪತ್ತು ಅತಿ ಕಠೋರವಾಗಿದೆ. ಈಗ ಅದು ಕೊನೆಗೊಳ್ಳುವುದು. ಯಾವ ಸಮುದಾಯಕ್ಕೆ ದುಆ ಮಾಡಲು ಸೌಭಾಗ್ಯ ಸಿಕ್ಕಿತ್ತದೋ, ಆ ಸಮುದಾಯದ ವಿಪತ್ತು ದೂರವಾಯಿತು ಎಂದು ತಿಳಿಯಬೇಕು. ಹಝ್ರತ್ ಉಮರ್(ರ) ಇತರ ಪಟ್ಟಣಗಳ ಗವರ್ನರ್‌ಗಳ ಹೆಸರಲ್ಲಿ ಹೀಗೆ ಪತ್ರ ಬರೆದರು: ನೀವು ಮದೀನ ಮತ್ತು ಅದರ ಸುತ್ತಮುತ್ತಲಿನ ಜನರಿಗಾಗಿ **ಇಸ್ತಿಸ್‌ಖಾ** ನಮಾಝ್ ಎಂದರೆ, ಮಳೆಗಾಗಿ ನಮಾಝ್ ಮಾಡು. ಏಕೆಂದರೆ ಅವರು ವಿಪತ್ತಿನ ಪಾರಮ್ಯವನ್ನು ತಲುಪಿರುವರು. ಹಝ್ರತ್ ಉಮರ್(ರ) ಮುಸ್ಲಿಮರನ್ನು **ಇಸ್ತಿಸ್‌ಖಾ** ನಮಾಝ್ ನಿರ್ವಹಿಸಲಿಕ್ಕಾಗಿ ಹೊರಗೆ ಮೈದಾನದಲ್ಲಿ ಒಟ್ಟುಗೂಡಿಸಿದರು ಮತ್ತು ಹಝ್ರತ್ ಅಬ್ಬಾಸ್‌ರನ್ನು ಜೊತೆಗೆ ಸೇರಿಸಿಕೊಂಡು ಹಾಜರಾದರು. ಸಂಕ್ಷಿಪ್ತವಾದ ಖುತ್ಬವನ್ನು ನೀಡಿದರು. ಅನಂತರ ನಮಾಝ್ ನಿರ್ವಹಿಸಿದರು. ಅನಂತರ ಮೊಣಕಾಲೂರಿ ಕುಳಿತುಕೊಂಡರು ಮತ್ತು ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಇಯ್ಯಾಕ ನಅಬುದು ವ ಇಯ್ಯಾಕ ನಸ್ತಈನ್, ಅಲ್ಲಾಹುಮ್ಮಗ್‌ಫಿರ್‌ಲನಾ ವರ್ ಹಮ್‌ನಾ ವರ್‌ಝು ಅನ್ನಾ** ಎಂದರೆ ಹೇ ಅಲ್ಲಾಹ್, ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ಹೇ ಅಲ್ಲಾಹ್, ನಮ್ಮನ್ನು ಕ್ಷಮಿಸು, ನಮ್ಮ ಮೇಲೆ ಕರುಣೆದೋರು. ನಮ್ಮಲ್ಲಿ ಸಂಪ್ರೀತನಾಗು. ಅನಂತರ ಅವರು ಮರಳಿ ಹೋದರು. ಹಝ್ರತ್ ಉಮರ್(ರ) ಮನೆಗೆ ತಲುಪುವುದಕ್ಕೆ ಮುಂಚಿತವಾಗಿ ಮೈದಾನ ಮಳೆಯ ಕಾರಣದಿಂದ ಕೆರೆಯಾಯಿತು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-508-509, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಒಂದು ವರದಿಯ ಪ್ರಕಾರ, ಹಝ್ರತ್ ಉಮರ್(ರ) ದುಆ ಮಾಡುತ್ತಾ ಹೇಳಿದರು: ಯಾ ಅಲ್ಲಾಹ್! ನಿನ್ನ ಪ್ರವಾದಿ(ಸ) ಅವರ ಕಾಲದಲ್ಲಿ ನಮ್ಮ ಮೇಲೆ ಬರ ಬಂದಾಗ ನಾವು ನಿನ್ನ ಪ್ರವಾದಿಗಾಗಿ ಮಳೆಗಾಗಿ ದುಆ ಮಾಡುತ್ತಿದ್ದೆವು, ಆದರೆ ನೀನು ನಮ್ಮ ಮೇಲೆ ಮಳೆ ಕಳುಹಿಸುತ್ತಿದ್ದೀಯ. ಇಂದು ನಾವು ನಿನ್ನ ಪ್ರವಾದಿಯ ಚಿಕ್ಕಪ್ಪನ ಮೂಲಕ ನಿನ್ನಲ್ಲಿ ದುಆ ಮಾಡುತ್ತಿದ್ದೇವೆ. ನೀನು ನಮ್ಮ ಈ ಬರಗಾಲವನ್ನು ಕೊನೆಗೊಳಿಸಿ ನಮ್ಮ ಮೇಲೆ ಮಳೆ ಸುರಿಸು. ಆಗ ಜನರು ಇನ್ನೂ ತಮ್ಮ ತಮ್ಮ ಸ್ಥಳಗಳನ್ನು ಬಿಟ್ಟಿರಲಿಲ್ಲ ಅಷ್ಟರಲ್ಲೇ ಮಳೆ ಬೀಳಲು ಪ್ರಾರಂಭಿಸಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-4, ಪುಟ-21, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಮಸ್ಜಿದ್ ನಬವಿಯಲ್ಲಿ ಚಾಪೆಗಳನ್ನು ಹಾಸುವುದು ಯಾವಾಗ ಶುರುವಾಯಿತು ಎಂಬುದರ ಬಗ್ಗೆ ಅಬ್ದುಲ್ಲಾಹ್ ಬಿನ್ ಇಬ್ರಾಹೀಮ್‌ರಿಂದ ಪ್ರಸ್ತಾಪವಿದೆ. ಮೊದಲು ಜನರು ಹಾಗೆಯೇ ನಮಾಝ್ ನಿರ್ವಹಿಸುತ್ತಿದ್ದರು. ನೆಲದಲ್ಲೇ ನಮಾಝ್ ನಿರ್ವಹಿಸುತ್ತಿದ್ದರು. ನಮಾಝ್ ನಿರ್ವಹಿಸುವಾಗ ಹಣೆಗೆ ಮಣ್ಣು ತಗುಲುತ್ತಿತ್ತು. ಅನಂತರ ಚಾಪೆಗಳನ್ನು ಹಾಸಲು ಶುರುಮಾಡಲಾಯಿತು. ಈ ಕುರಿತು ಅಬ್ದುಲ್ಲಾಹ್ ಬಿನ್ ಇಬ್ರಾಹೀಮ್‌ರಿಂದ ಹೀಗೆ ವರದಿಯಾಗಿದೆ: ಮೊಟ್ಟಮೊದಲು ಮಸ್ಜಿದ್ ನಬವಿಯಲ್ಲಿ ಚಾಪೆಗಳನ್ನು ಹಾಸಿದ್ದು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಆಗಿದ್ದರು. ಹಝ್ರತ್ ಉಮರ್(ರ) ಚಾಪೆಗಳನ್ನು ಹಾಸಲು ಆದೇಶ ನೀಡಿದರು. ಚಾಪೆಗಳನ್ನು ಅಖೀಖ್‌ನಿಂದ ತರಿಸಲಾಯಿತು ಮತ್ತು ಮಸ್ಜಿದ್ ನಬವಿಯಲ್ಲಿ ಹಾಸಲಾಯಿತು. ಅಖೀಖ್ ಎಂಬುದು ಒಂದು ಕಣಿವೆಯ ಹೆಸರಾಗಿದೆ. ಅದು ಮದೀನದ ಪಶ್ಚಿಮೋತ್ತರ ದಿಕ್ಕಿನಿಂದ ಶುರುವಾಗಿ ದಕ್ಷಿಣ ಪಶ್ಚಿಮ ತನಕ ಸುಮಾರು 150 ಕಿಲೋಮೀಟರ್ ತನಕ ಹರಡಿದೆ. ಇದು ಬಹಳ ದೊಡ್ಡ ಕಣಿವೆಯಾಗಿದೆ ಎಂದು ಹೇಳಲಾಗುತ್ತದೆ.

(ಇಝಾಲತುಲ್ ಖಿಫಾ ಅನ್ ಖಿಲಾಫತುಲ್ ಖುಲಫಾ, ಶಾಹ್ ವಲೀಉಲ್ಲಾಹ್, ಸಂಪುಟ-3, ಪುಟ-236, ಖದೀಮಿ ಕುತುಬ್ ಖಾನ ಕರಾಚಿ) (ಅಸ್ಸೀರತುನ್ನಬವೀ, ಪುಟ-168, ದಾರುಸ್ಸಲಾಮುರ್ರಿಯಾಝ್ 1424)

ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಹಿಜರೀ 70ರಲ್ಲಿ ಮಸ್ಜಿದ್ ನಬವಿಯನ್ನು ವಿಸ್ತೀರ್ಣಗೊಳಿಸಲಾಯಿತು. ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಮಸೀದಿ ಹಸಿ ಇಟ್ಟಿಗೆಗಳಿಂದ ನಿರ್ಮಿಸಲಾಗಿತ್ತು. ಅದರ ಚಾವಣಿ ಖರ್ಜೂರದ ಕೊಂಬೆಗಳು ಮತ್ತು ಎಲೆಗಳಿಂದ ತಯಾರಿಸಲಾಗಿತ್ತು. ಅದರ ಕಂಬಗಳು ಖರ್ಜೂರದ ಕಾಂಡದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಅದನ್ನು ಅದೇ ಸ್ಥಿತಿಯಲ್ಲಿ ಬಿಟ್ಟರು. ಅದರಲ್ಲಿ ಯಾವುದೇ ವಿಸ್ತೀರ್ಣ ಅಥವಾ ಬದಲಾವಣೆ ಮಾಡಲಿಲ್ಲ. ಹಝ್ರತ್ ಉಮರ್(ರ) ಅದನ್ನು ಪುನರ್ನಿರ್ಮಾಣ ಮತ್ತು ವಿಸ್ತೀರ್ಣಗೊಳಿಸಿದರು. ಆದರೆ ಅದರ ರೂಪ ಮತ್ತು ನಿರ್ಮಾಣ ಶೈಲಿಯಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ಚಾವಣಿ ಮೊದಲಿನಂತೆ ಖರ್ಜೂರದ ಎಲೆಗಳದ್ದೇ ಆಗಿತ್ತು. ಅವರು ಕಂಬಗಳನ್ನು ಮರದಿಂದ ತಯಾರಿಸಿದ್ದರು ಎಂದು ಮಾತ್ರ. ಹಝ್ರತ್ ಉಮರ್(ರ) ಹಿಜರೀ 17ರಲ್ಲಿ ಮಸೀದಿಯ ನಿರ್ಮಾಣವನ್ನು ತನ್ನ ಮೇಲ್ನೋಟದಲ್ಲಿ ಪೂರ್ತಿ ಮಾಡಿದರು.

ಅಬೂಸಈದ್ ಖುದ್‌ರೀ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹೀಗೆ ಆದೇಶಿಸಿದರು: "ಮಸ್ಜಿದ್ ನಬವಿಯ ಪುರ್ನನಿರ್ಮಾಣ ಮಾಡಬೇಕು. ಮಳೆಯಿಂದ ಜನರು ರಕ್ಷಣೆ ಪಡೆಯುವಂತಾಗಲು ಏರ್ಪಾಡು ಮಾಡಬೇಕು." ಈ ವಿಸ್ತೀರ್ಣದಲ್ಲಿ ಖರ್ಚುವೆಚ್ಚಗಳನ್ನು ಕಡಿಮೆಗೊಳಿಸಲಿಕ್ಕಾಗಿ ಮಸೀದಿಯನ್ನು ಹಝ್ರತ್ ಪೈಗಂಬರರ(ಸ) ಅನುಗ್ರಹೀತ ಕಾಲದ ಶೈಲಿಯಲ್ಲೇ ನಿರ್ಮಾಣ ಮಾಡಲಾಯಿತು. (ಜುಸ್ತಜೂ ಎ ಮದೀನ, ಅಬ್ದುಲ್ ಹಮೀದ್ ಖಾರಿ, ಪುಟ-459, ಓರಿಎಂಟಲ್ ಪಬ್ಲಿಕೇಷನ್ ಲಾಹೋರ್, 2007)

ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಜನಗಣತಿ ಆರಂಭಿಸಲಾಗಿತ್ತು ಅಥವಾ ಅವರು ಅದನ್ನು ಆರಂಭಿಸಿದರು. ಅದೇ ರೀತಿಯಲ್ಲಿ ಆಹಾರವನ್ನು ಒದಗಿಸಲಿಕ್ಕಾಗಿ ರೇಶನ್ ಸಿಸ್ಟಮನ್ನು ಸಹ ಪರಿಚಯಿಸಲಾಯಿತು. ಇಸ್ಲಾಮಿಕ ಆಡಳಿತ ವ್ಯವಸ್ಥೆ ಹೇಗೆ ನಡೆಯುತ್ತಿತ್ತು ಎಂಬುದರ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮದೀನದಲ್ಲಿ ಬಂದು ಹಝ್ರತ್ ಪೈಗಂಬರ್(ಸ) ಮಾಡಿದ ಮೊದಲ ಕೆಲಸವೇನೆಂದರೆ, ಸೊತ್ತಿರುವವರನ್ನು ಸೊತ್ತಿಲ್ಲದವರ ಸಹೋದರರನ್ನಾಗಿ ಮಾಡಿದರು. ಅನ್ಸಾರ್ ಸೊತ್ತುಗಳ ಮಾಲಿಕರಾಗಿದ್ದರು ಮತ್ತು ಮುಹಾಜಿರರ ಬಳಿ ಸೊತ್ತಿರಲಿಲ್ಲ. ಅನ್ಸಾರ್ ಮತ್ತು ಮುಹಾಜಿರರ ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದರು. ಪ್ರತಿಯೊಬ್ಬ ಸೊತ್ತಿನ ಮಾಲಿಕನನ್ನು ಒಬ್ಬೊಬ್ಬ ಸೊತ್ತಿಲ್ಲದ ವ್ಯಕ್ತಿಯೊಂದಿಗೆ ಸೇರಿಸಿದರು. ಈ ಕಾರ್ಯದಲ್ಲಿ ಕೆಲವರು ಯಾವ ಹಂತಕ್ಕೆ ತಲುಪಿದರು ಎಂದರೆ, ಸೊತ್ತಿನ ವಿಷಯ ಬಿಡಿ, ಯಾರಿಗಾದರೂ ಇಬ್ಬರು ಪತ್ನಿಯಂದಿರು ಇದ್ದರೆ, ಅವರಲ್ಲಿ ಒಬ್ಬರನ್ನು ಮುಹಾಜಿರ್ ಸಹೋದರನನ ಮುಂದೆ ಸಮರ್ಪಿಸಿದರು. ಅದಕ್ಕಾಗಿ ತನ್ನ ಒಂದು ಪತ್ನಿಗೆ ತಲಾಖ್ ನೀಡಲು ಅನ್ಸಾರರು ತಯಾರಿದ್ದರು. ಅನ್ಸಾರ್ ಮತ್ತು ಮುಹಾಜಿರರ ನಡುವೆ ಸ್ಥಾಪಿಸಲಾದ ಸಾಹೋದರ್ಯ ಸಂಬಂಧವು ಇಸ್ಲಾಂ ಮುಂದಿರಿಸುವ ಸಮತ್ವದ ಮೊದಲ ಉದಾಹರಣೆಯಾಗಿದೆ. ಏಕೆಂದರೆ ಆಡಳಿತದ ಬುನಾದಿ ಮದೀನದಲ್ಲೇ ಹಾಕಲ್ಪಟ್ಟಿತ್ತು. ಆ ಕಾಲದಲ್ಲಿ ಹೆಚ್ಚಿನ ಸಂಪತ್ತು ಇರಲಿಲ್ಲ. ಆದ್ದರಿಂದ ಶ್ರೀಮಂತರನ್ನು ಮತ್ತು ಬಡವರನ್ನು ಹೀಗೆ ಸೇರಿಸುವ ದಾರಿಯೇ ಬಾಕಿ ಉಳಿದಿತ್ತು. ಹೀಗೆ ಪ್ರತಿಯೊಬ್ಬರಿಗೂ ಆಹಾರಕ್ಕೆ ಏನಾದರೂ ಲಭಿಸಬಹುದಾಗಿತ್ತು. ಅದೇ ರೀತಿಯಲ್ಲಿ ಒಂದು ಯುದ್ಧದ ಸಂದರ್ಭದಲ್ಲೂ ಸ್ವಲ್ಪ ಬದಲಾವಣೆಯೊಂದಿಗೆ ಈ ರೀತಿಯನ್ನು ಮಾಡಿದರು. ಒಂದು ಯುದ್ಧದ ಸಂದರ್ಭದಲ್ಲಿ, ಕೆಲವು ಜನರ ಬಳಿ ಊಟಕ್ಕೆ ಏನೂ ಇಲ್ಲವೆಂದು ಹಝ್ರತ್ ಪೈಗಂಬರರಿಗೆ(ಸ) ಗೊತ್ತಾಯಿತು. ಇದ್ದರೂ ಬಹಳ ಕಡಿಮೆ ಮತ್ತು ಕೆಲವರ ಬಳಿ ಬಹಳ ಹೆಚ್ಚಿತ್ತು. ಈ ಸ್ಥಿತಿಯನ್ನು ಕಂಡುಕೊಂಡು ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮೆಲ್ಲರ ಬಳಿ ಏನಿದೆಯೋ ಅವುಗಳನ್ನೆಲ್ಲ ಒಂದು ಜಾಗದಲ್ಲಿ ಒಟ್ಟುಸೇರಿಸಿರಿ. ಹೀಗೆ ಎಲ್ಲ ಆಹಾರ ವಸ್ತುಗಳನ್ನು ತರಲಾಯಿತು. ಎಲ್ಲರಿಗೂ ನ್ಯಾಯಯುತವಾಗಿ ಆಹಾರ ಲಭಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ರೇಷನ್ ನಿಶ್ಚಯಿಸಿದರು. ಎಲ್ಲರಿಗೂ ಊಟ ಲಭಿಸಲಿಕ್ಕಾಗಿ ಅದೇ ರೀತಿಯನ್ನು ಅವಲಂಬಿಸಲಾಯಿತು. ಸಾಧ್ಯವಾಗುವಷ್ಟು ಕಾಲ ಎಲ್ಲರೂ ಬೇರೆ ಬೇರೆಯಾಗಿ ಊಟ ಮಾಡಿದರು. ಆದರೆ ಕೆಲವರು ಹಸಿವೆಯಿಂದ ಇರಬೇಕಾದ ಪರಿಸ್ಥಿತಿ ಉಂಟಾದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಈಗ ನಿಮಗೆ ಬೇರೆ ಬೇರೆಯಾಗಿ ಊಟ ಮಾಡುವ ಅನುಮತಿಯಿಲ್ಲ. ಈಗ ಎಲ್ಲರಿಗೂ ಒಂದೇ ಜಾಗದಿಂದ ಸಮವಾಗಿ ಊಟ ಸಿಗುವುದು. ಇದು ಸಂದರ್ಭಾನುಸಾರ ಮಾಡಲಾದ ತೀರ್ಮಾನವಾಗಿತ್ತು. ಸೋಶಿಯಲಿಝಂ ಅಥವಾ ಕಮ್ಯೂನಿಝಂ ಸಿದ್ಧಾಂತವನ್ನು ಇಲ್ಲಿ ಸ್ಥಾಪಿಸಲಾಗಿರಲಿಲ್ಲ. ಹೇಗಿದ್ದರೂ ಸಹಾಬರು ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಈ ಆದೇಶವನ್ನು ನಾವೆಲ್ಲರೂ ಕಟ್ಟುನಿಟ್ಟಾಗಿ ಅನುಸರಿಸಿದ್ದೆವು. ನಮ್ಮ ಬಳಿ ಒಂದು ಖರ್ಜೂರವಿದ್ದರೂ ಅದನ್ನು ತಿನ್ನುವುದನ್ನು ನಾವು ಮೋಸತನವಾಗಿ ಭಾವಿಸುತ್ತಿದ್ದೆವು. ಅದನ್ನು ಸ್ಟೋರಿಗೆ ತಲುಪಿಸುವ ತನಕ ನಮಗೆ ಸಮಾಧಾನವಾಗುತ್ತಿರಲಿಲ್ಲ.

ಅನಂತರ ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಸಂಪತ್ತಿನ ಬಾಗಿಲು ಇಸ್ಲಾಮಿಗಾಗಿ ತೆರೆಯಲ್ಪಟ್ಟಿತು. ಆದರೆ ಈ ಬಗ್ಗೆಗಿನ ವಿಶದವಾದ ವ್ಯವಸ್ಥೆ ಹಝ್ರತ್ ಪೈಗಂಬರರ(ಸ) ನಂತರ ಜಾರಿಯಾಗಬೇಕು ಎಂದು ಅಲ್ಲಾಹನು ಇಚ್ಛಿಸಿದ್ದನು. ಅಲ್ಲಾಹನು ಹಝ್ರತ್ ಪೈಗಂಬರರ(ಸ) ಕೈಯಿಂದ ಒಂದು ಮಾದರಿಯನ್ನು ಸ್ಥಾಪಿಸಿದರು. ಅನಂತರ ಮದೀನ ತಲುಪಿದಾಗ ಅನ್ಸಾರ್‌ಗಳು ತಮ್ಮ ಸಂಪತ್ತುಗಳನ್ನು ಮುಹಾಜಿರರಿಗೆ ಸಮರ್ಪಿಸಿದರು. ಮುಹಾಜಿರರು ಹೇಳಿದರು: ನಾವು ಈ ಭೂಮಿಯನ್ನು ಉಚಿತವಾಗಿ ಪಡೆಯಲು ತಯಾರಲ್ಲ. ನೀವು ಈ ಭೂಮಿಯಲ್ಲಿ ಕೃಷಿ ಮಾಡುವೆವು ಮತ್ತು ನಿಮ್ಮ ಪಾಲನ್ನು ನಿಮಗೆ ಕೊಡುವೆವು. ಇದು ಮುಹಾಜಿರರ ಕಡೆಯಿಂದ ಅವರ ಬಯಕೆ ಮಾತ್ರವಾಗಿತ್ತು. ಅನ್ಸಾರರು ತಮ್ಮ ಭೂಸ್ವತ್ತನ್ನು ಕೊಡುವುದರಿಂದ ಹಿಂಜರಿಕೆ ತೋರಿಸಿರಲಿಲ್ಲ. ಅನ್ಸಾರರು ಎಲ್ಲವನ್ನು ಕೊಟ್ಟರು. ಆದರೆ ಮುಹಾಜಿರರು ಅದನ್ನು ಪಡೆಯಲಿಲ್ಲವೆಂಬುದು ಬೇರೆ ಸಂಗತಿಯಾಗಿದೆ. ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಈ ಕೆಲಸವನ್ನು ತನ್ನ ಜೀವಿತದಲ್ಲೇ ಶುರುಮಾಡಿದ್ದರು. ಎಲ್ಲಿಯ ವರೆಗೆ ಎಂದರೆ ಬಹ್ರೈನಿನ ಅರಸ ಮುಸ್ಲಿಮನಾದಾಗ ಹಝ್ರತ್ ಪೈಗಂಬರ್(ಸ) ಅವರಿಗೆ ಹೀಗೆ ನಿರ್ದೇಶನ ನೀಡಿದರು: ನಿಮ್ಮ ದೇಶದಲ್ಲಿ ಕೃಷಿ ಮಾಡಲು ಭೂಮಿಯಿಲ್ಲದ ಜನರು ಹಸಿವಿನಿಂದ ಇರದಿರಲು ಮತ್ತು ಧರಿಸಲು ಬಟ್ಟೆಯಿಲ್ಲದಂತೆ ಆಗದಿರಲು ನೀವು ಅವರಿಗೆ ನಾಲ್ಕು ದಿರ್ಹಂ ಮತ್ತು ಬಟ್ಟೆಗಳನ್ನು ಕೊಡಬೇಕು. ಅನಂತರ ಮುಸ್ಲಿಮರ ಬಳಿ ಸಂಪತ್ತು ಬರಲು ಶುರುವಾಯಿತು. ಮುಸ್ಲಿಮರು ಕಡಿಮೆಯೂ, ಸಂಪತ್ತು ಹೆಚ್ಚೂ ಆದ ಕಾರಣ ಯಾವುದೇ ಹೊಸ ಕಾನೂನಿನ ಆವಶ್ಯಕತೆಯಿರಲಿಲ್ಲ.

ಹಝ್ರತ್ ಪೈಗಂಬರರ(ಸ) ನಿಧನದ ನಂತರ ಮುಸ್ಲಿಮರು ಲೋಕದ ವಿವಿಧ ಸ್ಥಳಗಳಲ್ಲಿ ಹರಡಲು ಶುರುವಾಯಿತು. ಆಗ ಅನ್ಯ ಸಮುದಾಯದವರು ಸಹ ಇಸ್ಲಾಮಿನಲ್ಲಿ ಪ್ರವೇಶಿಸಿದರು. ಅರೇಬಿಯರು ಒಂದು ಸಮುದಾಯದಂತಿದ್ದರು. ಪರಸ್ಪರ ಸಮಾನತೆಯನ್ನು ಹೊಂದಿದ್ದರು. ಇಸ್ಲಾಂ ವಿವಿಧ ಮೂಲೆಗಳಿಗೆ ತಲುಪಿದಾಗ ಅವರಿಗೆ ಆಹಾರದ ವ್ಯವಸ್ಥೆ ಮಾಡುವುದು ಕಷ್ಟದಾಯಕವಾಯಿತು. ಇಂತಹ ಸ್ಥಿತಿಯಲ್ಲಿ ಹಝ್ರತ್ ಉಮರ್(ರ) ಎಲ್ಲ ಜನರ ಜನಗಣತಿಯನ್ನು ಮಾಡಿಸಿದರು ಮತ್ತು ರಾಶನಂಗ್ ಅಥವಾ ಪಡಿತರ ವ್ಯವಸ್ಥೆ ಶುರುಮಾಡಿದರು. ಪ್ರಜೆಗಳಿಂದ ಸಂಪತ್ತನ್ನು ಕಸಿದುಕೊಳ್ಳಲಿಕ್ಕಾಗಿ ಹಝ್ರತ್ ಉಮರ್(ರ) ಜನಗಣತಿ ಮಾಡಿರಲಿಲ್ಲ. ಬದಲಾಗಿ ಅವರ ಅನ್ನದ ವ್ಯವಸ್ಥೆ ಮಾಡಲು ಜನಗಣತಿ ಮಾಡಲಾಗಿತ್ತು. ಜನರು ಬಲಿಯಾಡು ಆಗಲಿಕ್ಕಾಗಿ ಮತ್ತು ಸೈನ್ಯಕ್ಕೆ ಭರ್ತಿ ಮಾಡಲಿಕ್ಕಾಗಿ ಲೋಕದ ಸರ್ಕಾರಗಳು ಜನಗಣತಿ ಮಾಡುತ್ತಾರೆ. ಆದರೆ ಜನರಿಗೆ ಆಹಾರ ಒದಗಿಸಲಿಕ್ಕಾಗಿ ಹಝ್ರತ್ ಉಮರ್(ರ) ಜನಗಣತಿ ಮಾಡಿಸಿದ್ದರು. ಹೀಗೆ ಜನಗಣತಿ ಮಾಡಿದ ನಂತರ ಎಲ್ಲರಿಗೂ ಒಂದು ನಿಶ್ಚಿತ ವ್ಯವಸ್ಥೆಯ ಅಡಿಯಲ್ಲಿ ಆಹಾರ ಲಭಿಸುತ್ತಿತ್ತು. ಉಳಿದ ಆವಶ್ಯಕತೆಗಳಿಗಾಗಿ ಸ್ವಲ್ಪ ಮಾಸಿಕ ವೇತನವನ್ನು ನೀಡಲಾಗುತ್ತಿತ್ತು. ಈ ವಿಷಯವಾಗಿ ಎಷ್ಟು ಮುನ್ನೆಚ್ಚರಿಕೆ ವಹಿಸಲಾಗುತ್ತಿತ್ತು ಎಂದರೆ, ಹಝ್ರತ್ ಉಮರರ ಕಾಲದಲ್ಲಿ ಸಿರಿಯದ ಮೇಲೆ ವಿಜಯ ಸಾಧಿಸಲಾದಾಗ ಅಲ್ಲಿಂದ ಸಾಕಷ್ಟು ಓಲಿವ್ ಎಣ್ಣೆ ಬಂತು. ಹಝ್ರತ್ ಉಮರ್(ರ) ಒಂದು ಸಲ ಜನರೊಡನೆ ಹೇಳಿದರು: "ಪ್ರತಿಯೊಬ್ಬರಿಗೂ ಒಲಿವ್ ಎಣ್ಣೆ ಸಿಗಲು ಆರಂಭವಾಗಿದೆ. ಒಲಿವು ಎಣ್ಣೆಯ ಉಪಯೋಗದಿಂದ ನನ್ನ ಹೊಟ್ಟೆ ಉಬ್ಬುತ್ತಿದೆ. ನೀವು ನನಗೆ ಬೈತುಲ್‌ಮಾಲಿನಿಂದ ಅಷ್ಟೇ ಬೆಲೆಗೆ ತುಪ್ಪ ಪಡೆಯಲು ಅನುಮತಿ ಕೊಡಿರಿ. ಒಲಿವು ನನ್ನ ಆರೋಗ್ಯಕ್ಕೆ ಸರಿಹೊಂದದ ಕಾರಣದಿಂದ ಒಲಿವು ಎಣ್ಣೆ ಎಷ್ಟು ತೆಗೆಯುತ್ತಿದ್ದೆನೋ ಅಷ್ಟೇ ಬೆಲೆಗೆ ತುಪ್ಪವನ್ನು ತೆಗೆಯಲು ಅನುಮತಿ ಕೊಡಿರಿ." ಒಟ್ಟಿನಲ್ಲಿ, ಇದು ಜನರ ಆವಶ್ಯಕತೆಗಳನ್ನು ಪೂರೈಸಲು ಇಸ್ಲಾಂ ಎತ್ತಿದ ಮೊದಲ ಹೆಜ್ಜೆಯಾಗಿತ್ತು. ಈ ವ್ಯವಸ್ಥೆ ಸ್ಥಾಪಿತವಾದ ನಂತರ ಬೇರೆ ವ್ಯವಸ್ಥೆ ಮಾಡುವ ಆವಶ್ಯಕತೆಯಿರುವುದಿಲ್ಲ. ಏಕೆಂದರೆ ಪೂರ್ತಿ ದೇಶದ ಆವಶ್ಯಕತೆಯ ಜವಾಬ್ದಾರಿ ಸರ್ಕಾರದ ಮೇಲೆ ಆಗುತ್ತದೆ. ಜನರ ಆಹಾರ, ಪಾನೀಯ, ಬಟ್ಟೆ, ಶಿಕ್ಷಣ, ರೋಗಿಗಳ ಚಿಕಿತ್ಸೆ ಮತ್ತು ಅವರ ವಸತಿ ಎಲ್ಲವೂ ಸರ್ಕಾರದ ಜವಾಬ್ದಾರಿಯಾಗಿದೆ. ಈ ಆವಶ್ಯಕತೆ ಪೂರ್ತಿಯಾದರೆ ಯಾವುದೇ ಬೀಮ ಇತ್ಯಾದಿಗಳ ಆವಶ್ಯಕತೆಯಿರುವುದಿಲ್ಲ. ಬಡವರ ಆಹಾರ ಮತ್ತು ವಸ್ತ್ರದ ಏರ್ಪಾಡನ್ನು ಸೋವಿಯಟ್ ರಶ್ಯ ಮಾಡಿತ್ತು ಎಂದು ಇಂದು ಹೇಳಲಾಗುತ್ತದೆ. ಆದರೆ ಮೊಟ್ಟಮೊದಲು ಈ ರೀತಿಯ ಆರ್ಥಿಕ ವ್ಯವಸ್ಥೆಯನ್ನು ಇಸ್ಲಾಂ ಜಾರಿ ಮಾಡಿತ್ತು. ಹಝ್ರತ್ ಉಮರರ(ರ) ಕಾಲದಲ್ಲಿ ಪ್ರತಿಯೊಂದು ಹಳ್ಳಿ, ಗ್ರಾಮ ಮತ್ತು ಪಟ್ಟಣದಲ್ಲಿ ಜನರ ಹೆಸರು ರೆಜಿಸ್ಟರ್‌ನಲ್ಲಿ ನಮೂದಿಸಲಾಗುತ್ತಿತ್ತು.

ಚರಿತ್ರೆಯಲ್ಲಿ ಹೀಗೆ ಪ್ರಸ್ತಾಪ ಬರುತ್ತದೆ: ಹಝ್ರತ್ ಉಮರ್(ರ) ಆರಂಭದಲ್ಲಿ ಮಾಡಿದ ತೀರ್ಮಾನದಲ್ಲಿ ಹಾಲುಣ್ಣುವ ಮಕ್ಕಳಿಗೆ ರಾಷನ್ ಲಭಿಸುತ್ತಿರಲಿಲ್ಲ. ತಾಯಂದಿರು ತಮ್ಮ ಮಗುವಿಗೆ ಹಾಲು ಕೊಡುವುದನ್ನು ನಿಲ್ಲಿಸುವಾಗಲೇ ಧಾನ್ಯ ಇತ್ಯಾದಿ ರೂಪದಲ್ಲಿ ಸಹಾಯ ಲಭಿಸಲು ಶುರುವಾಗುತ್ತಿತ್ತು. ಕಳೆದ ಖುತ್ಬದಲ್ಲಿ ಹೇಳಿದಂತೆ ಒಂದು ರಾತ್ರಿ ಹಝ್ರತ್ ಉಮರ್(ರ) ಜನರ ಸ್ಥಿತಿಗತಿಗಳನ್ನು ಅರಿಯಲು ಸುತ್ತಾಡುತ್ತಿದ್ದರು. ಹೀಗಿರುವಾಗ ಒಂದು ಡೇರೆಯಿಂದ ಒಂದು ಮಗುವಿನ ಅಳು ಅವರಿಗೆ ಕೇಳಿಬಂತು. ಅವರು ಅಲ್ಲಿ ನಿಂತರು. ಆದರೆ ಮಗು ಅಳುತ್ತಲೇ ಹೋಗುತ್ತಿತ್ತು. ಮಗು ನಿದ್ದೆ ಹೋಗುವಂತಾಗಲು ತಾಯಿಯು ಅದರ ಬೆನ್ನು ತಟ್ಟಿ ಕೊಡುತ್ತಿದ್ದಳು. ಬಹಳ ಸಮಯವಾದಾಗ, ಹಝ್ರತ್

ಉಮರ್(ರ) ಡೇರೆಯ ಒಳಗೆ ಹೋದರು ಮತು ಹೀಗೆ ಕೇಳಿದರು: ನೀನು ಮಗುವಿಗೆ ಏಕೆ ಹಾಲು ಕೊಡುತ್ತಿಲ್ಲ. ಮಗು ಎಷ್ಟು ಸಮಯದಿಂದ ಅಳುತ್ತಿದೆಯಲ್ಲವೇ? ಅವಳ ಬಳಿಗೆ ಬಂದದ್ದು ಹಝ್ರತ್ ಉಮರ್(ರ) ಆಗಿತ್ತು ಎಂದು ಆ ಸ್ತ್ರೀಗೆ ಗೊತ್ತಿರಲಿಲ್ಲ. ಯಾವುದೋ ಸಾಮಾನ್ಯ ವ್ಯಕ್ತಿಯೆಂದು ಭಾವಿಸಿದ್ದಳು. ಆದ್ದರಿಂದ ಅವಳು ಹೇಳಿದಳು: ನಿನಗೆ ಗೊತ್ತಿಲ್ಲವೇ? ಹಾಲು ಕುಡಿಯುವ ಮಕ್ಕಳಿಗೆ ಆಹಾರ ಕೊಡಲಾಗುವುದಿಲ್ಲವೆಂದು ಉಮರ್ ತೀರ್ಮಾನಿಸಿದ್ದಾರೆ. ನಾವು ಬಡವರು. ನಮ್ಮ ಜೀವನ ಬಹಳ ಕಷ್ಟದಿಂದ ಸಾಗುತ್ತದೆ. ಬೈತುಲ್‌ಮಾಲಿಂದ ಆಹಾರ ಲಭಿಸಲಿಕ್ಕಾಗಿ ನಾನು ಮಗುವಿಗೆ ಹಾಲು ಕೊಡುವುದನ್ನು ನಿಲ್ಲಿಸಿದೆ. ಈಗ ಮಗು ಅಳುವುದಾದರೆ ಅಳಲಿ, ಉಮರಲ್ಲವೇ ಇಂತಹ ಕಾನೂನನ್ನು ಮಾಡಿದ್ದು? ಹಝ್ರತ್ ಉಮರ್(ರ) ಆಗಲೇ ಮರಳಿ ಹೋದರು. ಮಾರ್ಗದಲ್ಲಿ ಬಹಳ ದುಃಖದಿಂದ ಹೀಗೆ ಹೇಳುತ್ತಾ ಹೋಗುತ್ತಿದ್ದರು: ಉಮರ್, ಉಮರ್, ನಿನಗೆ ಗೊತ್ತಿಲ್ಲ. ನೀನು ಇಂತಹ ಕಾನೂನನ್ನು ಮಾಡಿಕೊಂಡು ಎಷ್ಟೆಲ್ಲ ಅರೇಬಿಯದ ಮಕ್ಕಳು ಹಾಲು ಕುಡಿಯುವುದನ್ನು ಬಿಡಿಸಿಕೊಂಡು ಭಾವೀ ಸಂತಾನವನ್ನು ದುರ್ಬಲಗೊಳಿಸಿದ್ದೀಯ. ಇವರೆಲ್ಲರ ಪಾಪ ಈಗ ನಿನ್ನ ಮೇಲಿದೆ. ಹೀಗೆ ಹೇಳುತ್ತಾ ಅವರು ಸ್ಟೋರಿಗೆ ಬಂದರು. ಬಾಗಿಲು ತೆರೆದರು ಮತ್ತು ಒಂದು ಗೋಣಿ ಗೋದಿಹಿಟ್ಟನ್ನು ತನ್ನ ಹೆಗಲ ಮೇಲೆ ಇರಿಸಿದ್ದರು. ಯಾವುದೋ ವ್ಯಕ್ತಿ ಹೇಳಿದರು: ಈ ಗೋಣಿಯನ್ನು ನಾನು ಎತ್ತುವೆನು. ಹಝ್ರತ್ ಉಮರ್(ರ) ಹೇಳಿದರು: ಇಲ್ಲ. ತಪ್ಪು ನನ್ನದೇ. ಆದ್ದರಿಂದ ಅದರ ಪರಿಣಾಮವನ್ನು ನಾನೇ ವಹಿಸುವೆನು. ಹೀಗೆ ಅವರು ಒಂದು ಗೋಣಿ ಗೋದಿಹಿಟ್ಟನ್ನು ಆ ಸ್ತ್ರೀಗೆ ತಲುಪಿಸಿದರು ಮತ್ತು ಮರುದಿನವೇ ಹೀಗೆ ಆದೇಶ ನೀಡಿದರು: ಮಗು ಹುಟ್ಟಿದ ದಿನದಿಂದಲೇ ಆಹಾರವನ್ನು ನಿಶ್ಚಯಿಸಲಾಗುವುದು. ಏಕೆಂದರೆ ಮಗುವಿಗೆ ಹಾಲು ಕುಡಿಸುವ ತಾಯಿಗೆ ಹೆಚ್ಚಿನ ಆಹಾರದ ಆವಶ್ಯಕತೆಯಿದೆ. (ತಫ್ಸೀರೆ ಕಬೀರ್, ಸಂಪುಟ–7, ಪುಟ–334–336)

ಇಸ್ಲಾಮಿನ ಪ್ರಕಾರ ಪ್ರತಿಯೊಂದು ವ್ಯಕ್ತಿಗೆ ಊಟ, ವಸತಿ ಮತ್ತು ಬಟ್ಟೆಯನ್ನು ಒದಗಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ಈ ಕಾನೂನನ್ನು ಮೊದಲು ಜಾರಿಗೊಳಿಸಿದ್ದು ಇಸ್ಲಾಮೇ ಆಗಿತ್ತು. ಈಗ ಇತರ ಸರ್ಕಾರಗಳು ಸಹ ಇದನ್ನು ನಕಲು ಮಾಡುತ್ತಿವೆ. ಆದರೆ ಪೂರ್ಣ ರೀತಿಯಲ್ಲಿ ಅಲ್ಲ. ಬೀಮ ಮತ್ತು ಫ್ಯಾಮಿಲಿ ಪೆನ್ಶನ್ ನೀಡಲಾಗುತ್ತವೆ. ಆದರೆ ಯೌವ್ವನ ಮತ್ತು ವೃದ್ಧಾಪ್ಯ ಎಂಬೀ ಎರಡೂ ಸ್ಥಿತಿಯಲ್ಲೂ ಆಹಾರ ಮತ್ತು ವಸ್ತ್ರದ ಉತ್ತರಧಾಯಿತ್ವ ಸರ್ಕಾರದ್ದಾಗಿದೆ ಎಂಬ ನಿಯಮ ಇಸ್ಲಾಮಿಗಿಂತ ಮುಂಚೆ ಬೇರೆ ಯಾವುದೇ ಧರ್ಮ ಮುಂದಿರಿಸಿಲ್ಲ. ಭೌತಿಕವಾದ ಸರ್ಕಾರಗಳು ಜನಗಣತಿಯನ್ನು ಮಾಡುವ ಉದ್ದೇಶ, ಪ್ರಜೆಗಳಿಂದ ಟಾಕ್ಸ್ ವಸೂಲು ಮಾಡಲಿಕ್ಕೆ ಮತ್ತು ಆವಶ್ಯವಾದ ಸಮಯದಲ್ಲಿ ಎಷ್ಟು ಜನರನ್ನು ಸೇನೆಗಾಗಿ ಭರ್ತಿ ಮಾಡಬಹುದು ಎಂದು ನೋಡಲಿಕ್ಕಾಗಿದೆ. ಆದರೆ ಇಸ್ಲಾಮಿಕ ಆಡಳಿತವು ಮೊತ್ತಮೊದಲು ಜನಗಣತಿ ಮಾಡಿದ್ದು ಹಝ್ರತ್ ಉಮರರ ಕಾಲದಲ್ಲಾಗಿತ್ತು. ಅದಕ್ಕಿರುವ ಕಾರಣವೇನೆಂದರೆ, ಎಲ್ಲ ಜನರಿಗೂ ಊಟ ಮತ್ತು ಬಟ್ಟೆಯನ್ನು ಒದಗಿಸಬೇಕು ಎಂಬುದಾಗಿತ್ತು. ಕಂದಾಯ ವಸೂಲು ಮಾಡಲೂ ಸೈನ್ಯದಲ್ಲಿ ಭರ್ತಿ ಮಾಡಲಿಕ್ಕೋ ಅಲ್ಲ. ಬದಲಾಗಿ ಎಲ್ಲರಿಗೂ ಊಟ ಮತ್ತು ವಸ್ತ್ರಗಳನ್ನು ಒದಗಿಸಲಿಕ್ಕಾಗಿತ್ತು. ಹಝ್ರತ್ ಪೈಗಂಬರರ(ಸ) ಕಾಲದಲ್ಲೂ ಜನಗಣತಿ ನಡೆದಿತ್ತು. ಆದರೆ ಆ ಸಮಯದಲ್ಲಿ ಮುಸ್ಲಿಮರ ಆಡಳಿತವಿರಲಿಲ್ಲ. ಅಂದು ಜನಗಣತಿ ಮಾಡಿದ್ದ ಉದ್ದೇಶ ಕೇವಲ ಮುಸ್ಲಿಮರ ಸಂಖ್ಯೆಯನ್ನು ಅರಿಯಲಿಕ್ಕೆ ಬೇಕಾಗಿತ್ತು. ಇಸ್ಲಾಮಿನ ಆಡಳಿತದ ಅಡಿಯಲ್ಲಿ ನಡೆದ ಮೊದಲ ಜನಗಣತಿ ಹಝ್ರತ್ ಉಮರರ ಕಾಲದಲ್ಲಾಗಿತ್ತು. ಇದು ಬಹಳಷ್ಟು ಮುಖ್ಯವಾದ ಕೆಲಸವಾಗಿತ್ತು ಅದರಿಂದ ಲೋಕದಲ್ಲಿ ಶಾಂತಿ ಸ್ಥಾಪನೆಯಾಗುತ್ತದೆ. ಅರ್ಜಿ ಕೊಡಿರಿ, ಅದನ್ನು ಅವಲೋಕಿಸಲಾಗುವುದು ಎಂದು ಹೇಳುವುದು ಸರಿಯಲ್ಲ. ಅದನ್ನು ಪ್ರತಿಯೊಂದು ವ್ಯಕ್ತಿಯ ಅಭಿಮಾನ ಸಹಿಸಲು ಸಾಧ್ಯವಲ್ಲ. ಆದ್ದರಿಂದ ಊಟ ಮತ್ತು ಬಟ್ಟೆ ಸರ್ಕಾರದ ಜವಾಬ್ದಾರಿಯಾಗಿದೆ ಎಂಬ ನಿಯಮವನ್ನು ಇಸ್ಲಾಂ ನಿಶ್ಚಯಿಸಿತ್ತು. ಇದು ಶ್ರೀಮಂತರಿಗೂ ಬಡವರಿಗೂ ನೀಡಲಾಗುವುದು. ಕೋಟಿಪತಿಯಾಗಿದ್ದರೂ ಸರಿ. ಅದು ಅವರಿಗೆ ಬೇಡವೆಂದಾದರೆ, ಬೇರೆಯವರಿಗೆ ಕೊಡಬಹುದಾಗಿದೆ. (ತಫ್ಸೀರೆ ಕಬೀರ್, ಸಂಪುಟ–10, ಪುಟ–308)

ಶ್ರೀಮಂತರಿಗೆ ಸಿಗುವಾಗ, ದೇವಭಕ್ತಿಯಿರುವ ಶ್ರೀಮಂತ ವ್ಯಕ್ತಿ ಅದನ್ನು ದರಿದ್ರರಿಗೆ ಕೊಡುವೆನು. ಅದರಿಂದ ಪ್ರಯೋಜನ ಪಡೆಯಲಾರನು.

ಹಿಜರೀ 20ರಲ್ಲಿ ಆಡಳಿತ ಕಾರ್ಯಗಳು ಸುಲಭಗೊಳ್ಳಲಿಕ್ಕಾಗಿ ಮುಸ್ಲಿಮರ ಅಧೀನದಲ್ಲಿದ್ದ ದೇಶಗಳನ್ನು ಹಝ್ರತ್ ಉಮರ್(ರ) ಎಂಟು ರಾಜ್ಯಗಳಾಗಿ ವಿಂಗಡಿಸಿದರು. ಒಂದು ಮಕ್ಕ, ಎರಡು ಮದೀನ, ಮೂರು ಸಿರಿಯಾ, ನಾಲ್ಕು ಜಝೀರ, ಐದು ಬಸ್ರಾ, ಆರು ಕೂಫ, ಏಳು ಈಜಿಪ್ಟ್, ಎಂಟು ಪೆಲಸ್ತೀನ್. (ಅಲ್‌ಫಾರೂಖ್ ಅಝ್ ಶಿಬ್ಲಿ ನುಮಾನಿ, ಪುಟ–185, ದಾರುಲ್ ಇಶಾಅತ್ ಕರಾಚಿ 1991)

ಅದೇ ರೀತಿಯಲ್ಲಿ ಅವರ ಖಿಲಾಫತ್ ಕಾಲದಲ್ಲಿ ಶೂರಾ ಎಂದರೆ, ಸಮಾಲೋಚನೆ ಸಮಿತಿಯನ್ನು ಸ್ಥಾಪಿಸಲಾಯಿತು. ಮಜ್ಲಿಸೇ ಶೂರಾದಲ್ಲಿ ಅನ್ಸಾರ್ ಮತ್ತು ಮುಹಾಜಿರರ ಶ್ರೇಷ್ಠ ಸಹಾಬರು ಸದಸ್ಯರಾಗಿದ್ದರು. ಅನ್ಸಾರರಲ್ಲಿ ಎರಡೂ ಗೋತ್ರಗಳು ಇದ್ದುವು. ಔಸ್ ಮತ್ತು ಖಝ್ರಜ್. ಎರಡೂ ಕುಟುಂಬಗಳಿಂದ ಮಜ್ಲಿಸೇ ಶೂರದಲ್ಲಿ ಭಾಗವಹಿಸುವುದು ಕಡ್ಡಾಯವಾಗಿತ್ತು. ಮಜ್ಲಿಸ್ ಶೂರದಲ್ಲಿ ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ಮುಆದ್ ಬಿನ್ ಜಬಲ್, ಹಝ್ರತ್ ಅಬೀ ಬಿನ್ ಕಅಬ್, ಹಝ್ರತ್ ಝೈದ್ ಬಿನ್ ಸಾಬಿತ್ ಸೇರಿದ್ದರು. ಮಜ್ಲಿಸೇ ಶೂರದ ರೀತಿ ಏನಾಗಿತ್ತು ಎಂದರೆ, ಮೊದಲು ಒಬ್ಬ ಘೋಷಣೆ ಕೂಗುವ ವ್ಯಕ್ತಿ **ಅಸ್ಸಲಾತು ಜಾಮಿ** ಎಂದು ಘೋಷಿಸುತ್ತಿದ್ದನು. ಎಂದರೆ ಎಲ್ಲರೂ ನಮಾಝಿಗಾಗಿ ಒಟ್ಟು ಸೇರಿರಿ. ಜನರು ಒಟ್ಟು ಸೇರುವಾಗ ಹಝ್ರತ್ ಉಮರ್(ರ) ಮಸ್ಜಿದ್ ನಬವಿಯಲ್ಲಿ ಎರಡು ರಕಅತ್ ನಮಾಝ್ ನಿರ್ವಹಿಸುತ್ತಿದ್ದರು. ನಮಾಝಿನ ನಂತರ ಮಿಂಬರ್‌ನಲ್ಲಿ ಏರಿ ಖುತ್‌ಬ ಕೊಡುತ್ತಿದ್ದರು. ಸಮಾಲೋಚನೆ ನಡೆಸಬೇಕಾದ ಸಂಗತಿಯನ್ನು ಮುಂದಿರಿಸಲಾಗುತ್ತಿತ್ತು. ಅದರ ಮೇಲೆ ಚರ್ಚೆ ನಡೆಯುತ್ತಿತ್ತು. ದಿನನತ್ಯದ ವಿಷಯಗಳಲ್ಲಿ ಈ ಸಭೆಯ ತೀರ್ಮಾನವು ಸಾಕಾಗಿತ್ತು. ಆದರೆ ಯಾವುದಾದರೂ ಮುಖ್ಯ ವಿಷಯ ಬರುವುದಾದರೆ ಮುಹಾಜಿರರ ಮತ್ತು ಅನ್ಸಾರರ ಸಾರ್ವಜನಕ ಸಭೆ ನಡೆಯುತ್ತಿತ್ತು ಮತ್ತು ಒಮ್ಮತಾಭಿಪ್ರಾಯದಿಂದ ಆ ವಿಷಯ ತೀರ್ಮಾನಿಸಲ್ಪಡುತ್ತಿತ್ತು. ಸೈನಿಕರ ಸಂಬಳ, ಆಫೀಸಿನ ವಿಷಯ, ಅಧಿಕಾರಿಗಳ ನೇಮಕಾತಿ, ಅನ್ಯ ಸಮುದಾಯಗಳ ವ್ಯಾಪಾರ ಸ್ವಾತಂತ್ರ್ಯ, ಅವರಿಂದ ಪಡೆಯಬೇಕಾದ ಕಂದಾಯ. ಒಟ್ಟಿನಲ್ಲಿ ಪ್ರತಿಯೊಂದು ರೀತಿಯ ಹಲವು ವಿಷಯಗಳು ಶೂರದಲ್ಲಿ ಇರಿಸಿ ತೀರ್ಮಾನ ಮಾಡಲಾಗುತ್ತದೆ. ಮಜ್ಲಿಸೇ ಶೂರದ ಸಭೆ ವಿಶೇಷವಾದ ಆವಶ್ಯಕತೆಗಳು ಬರುವಾಗ ನಡೆಯುತ್ತಿತ್ತು. ಇದಲ್ಲದೇ ಬೇರೊಂದು ಸಭೆಯಿತ್ತು. ಅಲ್ಲಿ ದಿನನಿತ್ಯದ ವಿಷಯಗಳ ಮತ್ತು ಆವಶ್ಯಗಳ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಈ ಸಭೆ ಯಾವಾಗಲೂ ಮಸ್ಜಿದ್ ನಬವಿಯಲ್ಲಿ ಸಂಘಟಿಸಲಾಗುತ್ತಿತ್ತು ಮತ್ತು ಕೇವಲ ಮುಹಾಜಿರ್ ಸಹಾಬರು ಇದರಲ್ಲಿ ಭಾಗವಹಿಸುತ್ತಿದ್ದರು. ರಾಜ್ಯಗಳು ಮತ್ತು ಜಿಲ್ಲೆಗಳಿಂದ ಖಿಲಾಫತಿನ ಸನ್ನಿಧಿಗೆ ಬರುವ ದಿನನಿತ್ಯದ ವಾರ್ತೆಗಳನ್ನು ಹಜ಼್ರತ್ ಉಮರ್(ರ) ಈ ಸಭೆಯ ಮುಂದಿರಿಸುತ್ತಿದ್ದರು. (ಅಲ್‌ಫಾರೂಖ್ ಅಝ್ ಶಿಬ್ಲಿ ನುಮಾನಿ, ಪುಟ–180–182, ದಾರುಲ್ ಇಶಾಅತ್ ಕರಾಚಿ 1991)

ರಾಜ್ಯಗಳ ಮತ್ತು ಜಿಲ್ಲೆಗಳ ಅಧಿಕಾರಿಗಳನ್ನು ಹೆಚ್ಚಾಗಿ ಪ್ರಜೆಗಳ ಇಷ್ಟ ಪ್ರಕಾರ ಮತ್ತು ಕೆಲವೊಮ್ಮೆ ಚುನಾವಣೆಯ ಮೂಲಕ ನಿಶ್ಚಯಿಸಲಾಗುತ್ತಿತ್ತು. ಹುದ್ದೇದಾರರೊಡನೆ ಹಝ್ರತ್ ಉಮರ್(ರ) ಹೀಗೆ ಉಪದೇಶಿಸುತ್ತಿದ್ದರು: "ಜನರು ನಿಮ್ಮನ್ನು ನಕಲು ಮಾಡಲಿಕ್ಕೆ ಅಥವಾ ಅನುಸರಿಸಲಿಕ್ಕಾಗಿ ನಿಮ್ಮನ್ನು ಜನರ ನೇತಾರರನ್ನಾಗಿ ಮಾಡಿಸಿ ಕಳುಹಿಸಲಾಗುತ್ತಿದೆ. ಮುಸ್ಲಿಮರ ಹಕ್ಕುಗಳನ್ನು ಈಡೇರಿಸಿರಿ, ಅವರೊಡನೆ ಕಠಿಣವಾಗಿ ವರ್ತಿಸಬೇಡಿರಿ. ಯಾರನ್ನೂ ಅನಾವಶ್ಯಕವಾಗಿ ಹೊಗಳಬೇಡಿರಿ, ಬಹುಶಃ ಅವರು ಫಿತ್ನಕ್ಕೆ ಗುರಿಯಾಗುವರು." ತುರ್ಕಿ ಕುದುರೆಗಳಲ್ಲಿ ಸವಾರ ಮಾಡಬಾರದು, ತೆಳು ವಸ್ತ್ರಗಳನ್ನು ಧರಿಸಬಾರದು, ನುಣುಪಾದ ಗೋದಿಹಿಟ್ಟಿನಿಂದ ತಯಾರಿಸಿದ ರೊಟ್ಟಿಯನ್ನು ತಿನ್ನಬಾರದು, ಬಾಗಿಲಲ್ಲಿ ಕಾವಲುಗಾರರನ್ನು ನೇಮಿಸಬಾರದು ಎಂಬುದಾಗಿ ಅಧಿಕಾರಿಗಳಿಂದ ಪ್ರತಿಜ್ಞೆ ಪಡೆಯಲಾಗುತ್ತಿತ್ತು. ಅಧಿಕಾರಿಗಳ ಸಂಪತ್ತು ಮತ್ತು ಸಾಮಾನುಗಳನ್ನು ಪರಿಶೋಧಿಸಲಾಗುತ್ತಿತ್ತು. ಸಂಪತ್ತಿನ ಬಗ್ಗೆ ತೃಪ್ತಿಕರವಾದ ಕಾರಣಗಳು ನೀಡದಿದ್ದರೆ ಅವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಹಜ್ಜಿನ ಸಂದರ್ಭದಲ್ಲಿ ಖಂಡಿತ ಹಾಜರಾಗಬೇಕೆಂದು ಅಧಿಕಾರಿಗಳಿಗೆ ಆದೇಶ ನೀಡಲಾಗಿತ್ತು. ಅಲ್ಲಿ ಸಾರ್ವಜನಿಕ ನ್ಯಾಯಾಲಯ ನಡೆಸಲಾಗುತ್ತಿತ್ತು. ಅದರಲ್ಲಿ ಯಾವುದಾದರೂ ವ್ಯಕ್ತಿಗೆ ಯಾವುದಾದರೂ ಅಧಿಕಾರಿಯ ಬಗ್ಗೆ ದೂರು ಇದ್ದರೆ, ಅದನ್ನು ತಕ್ಷಣವೇ ಪರಿಹರಿಸಲಾಗುತ್ತಿತ್ತು.
(ಅಲ್‌ಫಾರೂಖ್ ಅಝ್ ಶಿಬ್ಲಿ ನುಮಾನಿ, ಪುಟ–189–193, ದಾರುಲ್ ಇಶಾಅತ್ ಕರಾಚಿ 1991)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರರ(ರ) ಕಾಲದ್ದೇ ಘಟನೆಯಾಗಿದೆ. ಕೂಫದ ಜನರು ತೀರಾ ಅನುಸರಣೆಯಿಲ್ಲದ ಜನರಾಗಿದ್ದರು. ಸದಾ ತಮ್ಮ ಅಧಿಕಾರಿಗಳ ವಿರುದ್ಧ ದೂರು ನೀಡುತ್ತಿದ್ದರು. ಹಝ್ರತ್ ಉಮರ್(ರ) ಅವರ ದೂರಿನ ಪ್ರಕಾರ ಅಧಿಕಾರಿಗಳನ್ನು ಬದಲಾಯಿಸುತ್ತಿದ್ದರು. ಅವರು ದೂರು ಮಾಡುತ್ತಲೇ

ಹೋಗುವಾಗ ಅಧಿಕಾರಿಗಳನ್ನು ಬದಲಿಸುತ್ತಾ ಹೋಗುವ ರೀತಿ ಸರಿಯಲ್ಲವೆಂದು ಕೆಲವರು ಹಝ್ರ್‌ರತ್ ಉಮರ್‌ರೊಡನೆ ಹೇಳುತ್ತಿದ್ದರು. ಆದರೆ ಹಝ್ರ್‌ರತ್ ಉಮರ್(ರ) ಹೇಳಿದರು: ಕೂಫದ ಜನರು ಸ್ವತಃ ದನಿಯುವ ವರೆಗೆ ನಾನು ಅಧಿಕಾರಿಗಳನ್ನು ಬದಲಿಸುತ್ತಾ ಹೋಗುವೆನು. ಹೀಗೆ ಅವರ ಕಡೆಯಿಂದ ಒಂದು ದೀರ್ಘಕಾಲ ದೂರುಗಳು ಬರುತ್ತಾ ಹೋದಾಗ, ಹಝ್ರ್‌ರತ್ ಉಮರ್(ರ) ಹೇಳಿದರು: ಈಗ ನಾನು ಕೂಫದ ಜನರನ್ನು ಸರಿಮಾಡುವ ಒಂದು ಗವರ್ನರ್‌ನನ್ನು ಕಳುಹಿಸುವೆನು. ಆ ಗವರ್ನರ್ ಹತ್ತೊಂಬತ್ತು ವಯಸ್ಸಿನ ಒಬ್ಬ ಯುವಕನಾಗಿದ್ದನು. ಅವರ ಹೆಸರು ಅಬ್ದುರ್ರಹ್ಮಾನ್ ಬಿನ್ ಅಬೀ ಲೈಲಾ ಎಂದಾಗಿತ್ತು. ಹತ್ತೊಂಬತ್ತು ವಯಸ್ಸಿನ ಒಬ್ಬ ಯುವಕನು ಅವರ ಗವರ್ನರ್ ಆಗಿ ಬರುತ್ತಿದ್ದಾನೆ ಎಂದು ಅವರಿಗೆ ಗೊತ್ತಾದಾಗ, ಎಲ್ಲರೂ ಸೇರಿ ಅವನನ್ನು ಗೇಲಿ ಮಾಡಲು ತೀರ್ಮಾನಿಸಿದರು. ಕೂಫದವರು ಕುಚೇಷ್ಟೆ ಮಾಡುವವರಾಗಿದ್ದರು. ಅವರು ಎಪ್ಪತ್ತು ಎಂಬತ್ತು ತೊಂಬತ್ತು ವರ್ಷ ಪ್ರಾಯದ ಮುದುಕರನ್ನು ಒಟ್ಟು ಸೇರಿಸಿಕೊಂಡು, ಅವರನ್ನು ಜೊತೆ ಸೇರಿಸಿ, ಪಟ್ಟಣದ ಎಲ್ಲ ಜನರ ಜೊತೆಗೆ ಅಬ್ದುರ್ರಹ್ಮಾನ್‌ರನ್ನು ಸ್ವಾಗತಿಸಲು ಹೋಗಲು ತೀರ್ಮಾನಿಸಿದರು. ಅದೇ ರೀತಿಯಲ್ಲಿ ಹಾಸ್ಯದ ರೂಪದಲ್ಲಿ ಅವರ ವಯಸ್ಸೆಷ್ಟು ಎಂದು ಕೇಳಲು ಉದ್ದೇಶಿಸಿದರು. ಅವರು ಅದಕ್ಕೆ ಉತ್ತರ ಕೊಡುವಾಗ ಗೇಲಿಮಾಡುವ ಮತ್ತು ಹುಡುಗನು ನಮ್ಮ ಗವರ್ನರ್ ಆಗಿರುವನು ಎಂದು ಹೇಳುವ ಎಂದು ಹೇಳಿದರು. ಹೀಗೆ ಈ ಯೋಜನೆಯೊಂದಿಗೆ ಹೊಸ ಗವರ್ನರ್‌ರನ್ನು ಸ್ವಾಗತಿಸಲು ಅವರು ಪಟ್ಟಣದಿಂದ ಮೂರು ಮೈಲುಗಳ ಹೊರಗೆ ಬಂದರು. ಅಲ್ಲಿಂದ ಕತ್ತೆಯ ಮೇಲೆ ಸವಾರರಾಗಿಕೊಂಡು ಅಬ್ದುರ್ರಹ್ಮಾನ್ ಬಿನ್ ಲೈಲಾ ಸಹ ಬಂದರು. ಕೂಫದ ಎಲ್ಲ ಜನರು ಸಾಲುಸಾಲಾಗಿ ನಿಂತಿದ್ದರು. ಮೊದಲ ಪಂಕ್ತಿಯಲ್ಲಿ ಮುದುಕರಾದ ನೇತಾರರು ಇದ್ದರು. ಅಬ್ದುರ್ರಹ್ಮಾನ್ ಬಿನ್ ಲೈಲಾ ಸಮೀಪಕ್ಕೆ ಬಂದಾಗ ಜನರು ಕೇಳಿದರು: ನಮ್ಮ ಗವರ್ನರ್ ಆಗಿ ಬಂದವರು ನೀವೇ ತಾನೇ? ನಿಮ್ಮ ಹೆಸರು ಅಬ್ದುರ್ರಹ್ಮಾನ್ ಎಂದಾಗಿದೆಯೇ? ಹೌದೆಂದು ಅವರು ಹೇಳಿದರು. ಆಗ ಅವರಲ್ಲಿ ಅತ್ಯಂತ ಮುದುಕನಾದ ಒಬ್ಬ ವ್ಯಕ್ತಿ ಮುಂದಕ್ಕೆ ಬಂದು ಕೇಳಿದರು: ನಿಮ್ಮ ವಯಸ್ಸೆಷ್ಟು? ಅಬ್ದುರ್ರಹ್ಮಾನ್ ಹೇಳಿದರು: ನನ್ನ ವಯಸ್ಸೇ? ನನ್ನ ವಯಸ್ಸನ್ನು ನೀವು ಹೀಗೆ ಅಂದಾಜು ಮಾಡಬಹುದು. ಹಝ್ರ್‌ರತ್ ಪೈಗಂಬರ್(ಸ) ಉಸಾಮ ಬಿನ್ ಝೈದ್‌ರನ್ನು ಹತ್ತು ಸಾವಿರ ಸಹಾಬರ ನೇತಾರರನ್ನಾಗಿ ಮಾಡಿಕೊಂಡು ಕಳುಹಿಸಿದಾಗ ಆ ಸಮಯದಲ್ಲಿ ಉಸಾಮ ಬಿನ್ ಝೈದ್‌ರ ವಯಸ್ಸು ಎಷ್ಟಿತ್ತೋ ಅದಕ್ಕಿಂತ ನನ್ನ ವಯಸ್ಸು ಒಂದು ವರ್ಷ ಹೆಚ್ಚಿಗೆ ಇದೆ. ಇದನ್ನು ಕೇಳಿದ ಕೂಡಲೆ ಎಲ್ಲರೂ ಮಂಜು ಬೀಳುವಂತೆ ನಾಚಿಕೆಯಿಂದ ಹಿಂದಕ್ಕೆ ಸರಿದರು. ಅವರು ಪರಸ್ಪರ ಹೇಳಿದರು: ಈ ಹುಡುಗ ಇಲ್ಲಿ ಇರುವ ವರೆಗೆ ಯಾರು ಮಾತನಾಡಬೇಡಿರಿ. ಇಲ್ಲದಿದ್ದರೆ ಇವನು ಚರ್ಮ ಸೀಳುವನು. ಹೀಗೆ ಅವರು ದೀರ್ಘಕಾಲ ಅಲ್ಲಿ ಗವರ್ನರ್ ಆಗಿದ್ದರು. ಕೂಫದ ಜನರು ಅವರ ಮುಂದೆ ಮಾತು ಎತ್ತುತ್ತಿರಲಿಲ್ಲ.

(ಖುತ್‌ಬಾತೆ ಮಹ್ಮೂದ್, ಸಂಪುಟ-23, ಪುಟ-222-223)

ಇರಾಕ್ ಮತ್ತು ಸಿರಿಯದ ಮೇಲೆ ವಿಜಯ ಸಾಧಿಸಲಾದ ನಂತರ ಭೂ ತೆರಿಗೆ ವ್ಯವಸ್ಥೆಯ ಕಡೆಗೆ ಹಝ್ರ್‌ರತ್ ಉಮರ್(ರ) ಗಮನಹರಿಸಿದರು. ಅರಸರು ವಶಪಡಿಸಿಕೊಂಡು ದರ್ಬಾರಿಗಳಿಗೆ ಮತ್ತು ಸರದಾರರಿಗೆ ನೀಡಿದ್ದ ಭೂಮಿಯನ್ನು ಅವರಿಂದ ಪಡೆದು ಹಝ್ರ್‌ರತ್ ಉಮರ್(ರ) ಪ್ರಾದೇಶಿಕ ಜನರಿಗೆ ಮರಳಿಕೊಟ್ಟರು. ಅದೇ ರೀತಿಯಲ್ಲಿ ಭೂ ತೆರಿಗೆಯ ಕಾನೂನನ್ನು ಸರಿಪಡಿಸಿಕೊಂಡು ವಸೂಲು ಮಾಡುವ ರೀತಿಯನ್ನು ಬಹಳ ಸುಗಮಗೊಳಿಸಿದರು. ಮುಸ್ಲಿಮೇತರ ಪ್ರಜೆಗಳಿಂದ ಹಝ್ರ್‌ರತ್ ಉಮರ್(ರ) ಅಭಿಪ್ರಾಯ ಕೇಳುತ್ತಿದ್ದರು ಮತ್ತು ಅವರ ಅಭಿಪ್ರಾಯಕ್ಕೆ ಬೆಲೆಕೊಡುತ್ತಿದ್ದರು.

ಹಝ್ರ್‌ರತ್ ಉಮರರ(ರ) ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

ಒಂದು ಘೋಷಣೆಯನ್ನು ನಾನು ಮಾಡಲು ಬಯಸುತ್ತೇನೆ. ಅದೇನೆಂದರೆ, ಅಹ್ಮದಿಯಾ ಎನ್ಸೈಕ್ಲೋಪೀಡಿಯ ತಯಾರಿಸಲಾಗಿದೆ. ಅದನ್ನು ಇಂದು ಲಾಂಚ್ ಮಾಡಲಾಗುವುದು. ಈ ವೆಬ್‌ಸೈಟನ್ನು ಆರ್ಕೈವ್ ಮತ್ತು ರಿಸರ್ಚ್ ಸೆಂಟರ್‌ನ ಕೇಂದ್ರ ವಿಭಾಗ ತಯಾರಿಸಿದೆ. ಇದರಲ್ಲಿ ಸೇರ್ಚ್ ಇಂಜಿನಿನ ಶೈಲಿಯಲ್ಲಿ ಜಮಾಅತಿನ ಪುಸ್ತಕಗಳು, ವ್ಯಕ್ತಿಗಳು, ಘಟನೆಗಳು, ಅಧ್ಯಾಪನೆಗಳು ಮತ್ತು ಕಟ್ಟಡಗಳಿಗೆ ಸಂಬಂಧಿಸಿದ ವಿಷಯಗಳನ್ನು ಶೋಧಿಸಬಹುದಾಗಿದೆ. ಪ್ರತಿಯೊಂದು ಎಂಟ್ರಿಯೊಂದಿಗೆ ಸಂಬಂಧಪಟ್ಟ ವೆಬ್‌ಸೈಟ್ಸ್, ವೀಡಿಯೋಸ್ ಮತ್ತು ಜಮಾಅತಿನ ಪತ್ರಿಕೆಗಳಿಂದ ವಿಷಯಗಳ ಲಿಂಕನ್ನು ಒದಗಿಸಲಾಗುತ್ತದೆ. ಲೋಕದೆಲ್ಲಡೆ ಹರಡಿರುವ ಜಮಾಅತಿನ ಬಾಂಧವರ ಬಳಿ ಅನೇಕ ಪ್ರಯೋಜನಕರವಾದ ಮಾಹಿತಿಗಳು ಇರುತ್ತವೆ. ಅವು ಎಲ್ಲೂ ರೆಕಾರ್ಡ್ ಆಗಿರುವುದಿಲ್ಲ. ಅದಕ್ಕಾಗಿ ಈ ವೆಬ್‌ಸೈಟಿನಲ್ಲಿ ಕೊಂಟ್ರಿಬ್ಯೂಟ್ ಎಂಬ ಒಂದು ಒಪ್ಶನ್ ಕೊಡಲಾಗಿದೆ. ಅದರ ಮೂಲಕ ಯಾವನೇ ವ್ಯಕ್ತಿ ಯಾವುದೇ ವಿಷಯದ ಬಗ್ಗೆ ತನ್ನ ಅರಿವು ಅಥವಾ ಅನುಭವ ಅಥವಾ ಡೊಕ್ಯೂಮೆಂಟ್‌ಗಳನ್ನು ಒದಗಿಸಬಹುದಾಗಿದೆ. ಹೀಗೆ ಒದಗಿಸಲಾಗುವ ವಿಷಯಗಳನ್ನು ಸಂಶೋಧನೆ ಮತ್ತು ರುಜುವಾತು ಮಾಡಿದ ನಂತರ ಸಂಬಂಧಪಟ್ಟ ವಿಷಯದ ಎಂಟ್ರಿಯಲ್ಲಿ ಸೇರ್ಪಡೆ ಮಾಡಲಾಗುವುದು.

ಈ ವೆಬ್‌ಸೈಟಿನ ತಯಾರಿಯಲ್ಲಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಹಂತಗಳನ್ನು ಐ.ಟಿ.ಯ ಕೇಂದ್ರ ವಿಭಾಗದ ಸ್ಥಿರ ಉದ್ಯೋಗಿಗಳು ಮತ್ತು ಸ್ವಯಂಸೇವಕರು ಅತ್ಯುತ್ತಮ ರೀತಿಯಲ್ಲಿ ಮುಗಿಸಿದ್ದಾರೆ. ವಿಷಯಗಳ ತಯಾರಿಯಲ್ಲಿ ಮತ್ತು ವಿಷಯಗಳನ್ನು ಪಡೆಯುವುದರಿಂದ ಹಿಡಿದು ತರ್ಜುಮೆ ಮತ್ತು ಅಪ್‌ಲೋಡಿಂಗ್ ತನಕದ ಎಲ್ಲ ಹಂತಗಳಲ್ಲಿ ಆರ್ಕೈವ್ ವಿಭಾಗದ ಮುರಬ್ಬಿಗಳು ಮತ್ತು ಸ್ವಯಂಸೇವಕರು ಅವಿಶ್ರಾಂತರಾಗಿ ಪರಿಶ್ರಮದಿಂದ ಕೆಲಸ ಮಾಡಿರುವರು. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲವನ್ನು ನೀಡಲಿ.

ಜುಮಾದ ನಂತರ ಇನ್‌ಶಾ ಅಲ್ಲಾಹ್ ಇಂದು ನಾನು ಅದನ್ನು ಲಾಂಚ್ ಮಾಡುತ್ತೇನೆ.

***********

*(ಪುಟ ಸಂಖ್ಯೆ 1ರ ಉಳಿದ ಭಾಗ)*

ಕಾಫಿರ್ ಆಗುವುದು. ಅವರು ಭಾವಿಸುವುದು ಒಬ್ಬ ವ್ಯಕ್ತಿಯನ್ನು ತಿರಸ್ಕರಿಸಿದರೆ ಏನಾಗುವುದು? ಈ ಜನರು ಅಲ್ಲಾಹನ ಸ್ನೇಹಿತರನ್ನು ಸಾಮಾನ್ಯರಂತೆ ತಿಳಿದುಕೊಳ್ಳುತ್ತಾರೆ. ಮತ್ತು ಹೇಳುತ್ತಾರೆ. ಅದರಿಂದ ಏನು ವ್ಯತ್ಯಾಸ ಬೀಳುವುದು? ಆದರೆ ವಾಸ್ತವವೇನೆಂದರೆ ಅಲ್ಲಾಹನ ಸ್ನೇಹಿತರ ತಿರಸ್ಕಾರ ವಿಶ್ವಾಸಹರಣಕ್ಕೆ ಕಾರಣವಾಗುತ್ತದೆ. ಯಾವ ವ್ಯಕ್ತಿ ಈ ಪೈಕಿ ಗಾಢವಾಗಿ ಯೋಚಿಸುವನೋ ಅವನು ಚೆನ್ನಾಗಿ ತಿಳಿದುಕೊಳ್ಳುವನು. ಅಲ್ಲದೇ ಯಾವ ರೀತಿ ಬಲ್ಲವನಾಗುವನು ಎಂದರೆ, ಕನ್ನಡಿಯಲ್ಲಿ ತಮ್ಮ ರೂಪ ನೋಡಿಕೊಳ್ಳುವವರ ಹಾಗೆ ಬಲ್ಲವನಾಗುವನು.

ನೆನಪಿಡಬೇಕು. ವಿಶ್ವಾಸಹರಣವು ಎರಡು ರೀತಿಯದ್ದಾಗಿರುತ್ತದೆ. ಒಂದು ಪ್ರವಾದಿಗಳ ತಿರಸ್ಕಾರ, ಅದನ್ನು ಯಾರು ಅಲ್ಲಗಳೆಯುವಂತಿಲ್ಲ. ಅದು ಒಪ್ಪಿತವಾದ ಮಾತಾಗಿದೆ. ಎರಡನೆಯ ಅಲ್ಲಾಹನ ಸ್ನೇಹಿತರ, ಸುಧಾರಕರ ನಿರಾಕರಣೆಯಿಂದಲೂ ವಿಶ್ವಾಸಹರಣವಾಗುತ್ತದೆ.

ಪ್ರವಾದಿಗಳ ನಿರಾಕರಣೆಯಿಂದ ವಿಶ್ವಾಸಹರಣವಾಗುತ್ತದೆ ಎಂಬ ಮಾತು ಸುಸ್ಪಷ್ಟವಿದೆ ಮತ್ತು ಎಲ್ಲರೂ ತಿಳಿದಿರುತ್ತಾರೆ. ಆದರೂ ನೆನಪಿಡಬೇಕಾದ ವಿಷಯವೇನೆಂದರೆ ಪ್ರವಾದಿಗಳ ನಿರಾಕರಣೆಯಿಂದ ವಿಶ್ವಾಸಹರಣ ಆಗಲು ಕಾರಣ. ಅವರು ಹೇಳುತ್ತಾರೆ. ನಾವು ಅಲ್ಲಾಹನ ಕಡೆಯಿಂದ ಆಗಮಿಸಿರುತ್ತೇವೆ. ಅಲ್ಲಾಹನು ಹೇಳುವನು ಏನೆಲ್ಲ ಇವರು ಹೇಳುವರೋ ಅವು ನನ್ನ ಮಾತಾಗಿರುತ್ತದೆ. ಇವನು ನನ್ನ ಸಂದೇಶವಾಹಕನಾಗಿದ್ದಾನೆ. ಅವನ ಮೇಲೆ ವಿಶ್ವಾಸ ತನ್ನಿರಿ. ನನ್ನ ಗ್ರಂಥದ ಮೇಲೆ ವಿಶ್ವಾಸವಿಡಿರಿ ಮತ್ತು ನನ್ನ ಆಜ್ಞೆಗಳನ್ನು ಪಾಲಿಸಿರಿ. ಯಾವ ವ್ಯಕ್ತಿ ಅಲ್ಲಾಹನ ಗ್ರಂಥದ ಮೇಲೆ ವಿಶ್ವಾಸ ತರುವುದಿಲ್ಲ ಮತ್ತು ಅವರಲ್ಲಿದ್ದ ಆಜ್ಞೆಗಳ ಮೇಲೆ ನಡೆಯುವುದಿಲ್ಲ. ಅದರಿಂದ ವಿಮುಖರಾಗಿ ಅವಿಶ್ವಾಸಿಯಾಗುತ್ತಾನೆ. ಆದರೆ ಅಲ್ಲಾಹನ ಸ್ನೇಹಿತರ ನಿರಾಕರಣೆಯಿಂದಾಗುವ ವಿಶ್ವಾಸಹರಣ ಬೇರೆ ರೀತಿಯದ್ದಾಗಿದೆ. ಒಂದು ಹದೀಸಿನ ವರದಿ ಹೀಗಿದೆ. ಅಲ್ಲಾಹನು ಹೇಳುವನು ಮನ್ ಆದ ಲೀ ವಲಿಯನ್ ಫಆಝುನತಹು ಲಿಲ್‌ಹರಬಿ - ಅರ್ಥಾತ್ ಯಾವ ವ್ಯಕ್ತಿ ನನ್ನ ಸ್ನೇಹಿತ ಜೊತೆ ಶತ್ರುವನ್ನು ಇರಿಸುವನು ಅವನು ನನ್ನೊಡನೆ ಯುದ್ಧಕ್ಕೆ ನಿಲ್ಲುವಂತಾಗುವನು.

(ಮಲ್ಫೂಝಾತ್, ಸಂಪುಟ-1, ಪುಟ-313 ಮುದ್ರಣ 2018 ಖಾದಿಯಾನ್)

## ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ª ÀÁr PÉÆq À ÁVz ÉÉ *(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)*

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಇಂದಿನವರೆಗೆ) ಆದರೆ ಅದರ ಮೇಲೆ ನಡೆದು ಒಬ್ಬನು ಸಹ, ಇಹ ಶಿಕ್ಷಣದ ಮೇಲೆ ನಡೆದು ನನಗೆ ದೇವಸಾಮಿಪ್ಯ ದೊರೆತಿದೆ ಎನ್ನುವವರಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ರವರು ಆಗಮಿಸಿ ಕೆಲ ಅವಧಿಯೇ ಕಳೆದಿವೆ. ಅವರ ಅನುಯಾಯಿಗಳಲ್ಲಿ ನೂರಾರು ಜನರನ್ನು ತೋರಿಸಬಹುದು. ಅವರು ಅಲ್ಲಾಹನೊಡನೆ ಸಂಭಾಷಣೆ ನಡೆಸಿದ್ದಾರೆ.

"ಮಾ ಲಹಾ ಮಿನ್ ಖರಾರ್" (1) ಅವರಿಗೆ ಎಲ್ಲಿಯೂ ನೆಲೆನಿಲ್ಲಲು ಆಗಲಿಲ್ಲ. ಅಂದರೆ ಅವರಿಗೆ ಅನುಭವ ಪಡೆದು ಯಾವುದಾದರೊಂದು ನಿರ್ಣಯಕ್ಕೆ ಬರಲು ಅವಕಾಶವೇ ಕೊಡಲಾಗುವುದಿಲ್ಲ. ಅನುಭವಿಸಿದವರೆಗೆ ಅವರು ಮರಣ ಹೊಂದುತ್ತಾರೆ. (2) ಅವರಿಗೆ ತಮ್ಮ ತತ್ವಗಳನ್ನು ಬದಲಿಸುವ ಅವಶ್ಯಕತೆಗಳು ಉಂಟಾಗುತ್ತದೆ. ಇಸ್ಲಾಮ್ ಪ್ರಾರಂಭದಿಂದ 'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದ್ ರಸೂಲುಲ್ಲಾಹ್ ಎಂದಿದೆ, ಅದಾದ ನಂತರ ಯಾವ ಬದಲಾವಣೆಯೂ ಅದು ಹೊಂದಿಲ್ಲ. ಆದರೆ ಅನ್ಯ ಧರ್ಮದವರಿಗೆ ತಮ್ಮ ತತ್ವಗಳನ್ನು ಬದಲಿಸುತ್ತಿರಬೇಕಾಗುತ್ತದೆ. ಉದಾಹರಣೆಗೆ ಬಹಾಯಿಯವರನ್ನು ಇರಾನ್‌ಗೆ ಹೋಗಿ ನೋಡಿ. ಅಲ್ಲಿ ಬಹಾಯಿಯರ ಶಿಕ್ಷಣ ಬೇರೆ ರೂಪದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಏಕೆಂದರೆ ಅಲ್ಲಿ ಶಿಯಾಗಳಿದ್ದಾರೆ. ಸುನ್ನಿ ದೇಶಗಳಲ್ಲಿ ಅದೇ ಧರ್ಮದ ಶಿಕ್ಷಣ ಬೇರೆ ರೀತಿಯಲ್ಲಿ ಪ್ರಸ್ತುತಪಡಿಸುತ್ತಾರೆ. ಅಮೇರಿಕಾಗೆ ಹೋದರೆ ಅಲ್ಲಿ ವಿಭಿನ್ನ ರೂಪ ಕಾಣಬಹುದು. ಅದೇ ರೀತಿ ಬ್ರಿಟಾನಿಯಾಗೆ ಹೋದರೆ, ಅಲ್ಲಿಯ ಜನರಿಗೆ ಹೊಂದುವಂತಹ ಶಿಕ್ಷಣ ಸ್ವೀಕರಿಸುತ್ತಾರೆ. ಅಂದ ಹಾಗೆ ನಾನು ಬ್ರಿಟಾನಿಯಾಕ್ಕೆ ಹೋದಾಗ ಓರ್ವ ಮಹಿಳೆ ನನ್ನೊಡನೆ ಮಾತನಾಡಿದಳು. ನಾನು ಕೇಳಿದೆ. ಬಹಾಉಲ್ಲಾ ಯಾವ ಹೊಸ ಮಾತನ್ನು ಮುಂದಿಟ್ಟಿದೆ. ಆಕೆ ಹೇಳಿದರು. ಬಹಾಉಲ್ಲಾ ಹೇಳಿದರು. ಒಂದೇ ಮಹಿಳೆಯೊಂದಿಗೆ ಮದುವೆ ಆಗಬೇಕು. ನಾನು ಹೇಳಿದೆ. ಸ್ವಯಂ ಅವರೇ ಎರಡು ಪತ್ನಿಯರನ್ನು ಹೊಂದಿದ್ದಾರೆ. ಮೊದಲು ಆಕೆ ನಿರಾಕರಿಸಿದಳು. ಮತ್ತೆ ಹೇಳಿದಳು. ಅದು ದಾವೆ ಹೂಡುವ ಮೊದಲಿನ ಮಾತಾಗಿದೆ. ನಾನು ಹೇಳಿದೆ. ಅವರು ದೇವನಾದ ಮೇಲೆ, ಹಿಂದೆ ಮುಂದೆಯ ಪ್ರಶ್ನೆಯೇ ಏಳುವುದಿಲ್ಲ. ಅಗೋಚರ ಜ್ಞಾನ ಹೊಂದಿದ ವ್ಯಕ್ತಿತ್ವಕ್ಕೆ ಹಿಂದೆ ಮುಂದೆ ಅನ್ನುವುದು ಅರ್ಥವಿಲ್ಲದ ಮಾತಾಗಿದೆ. ಅವರಿಗೆ ಮೊದಲೇ ತಿಳಿದಿರಬೇಕಿತ್ತು. ನಾನು ಮುಂದೆ ಯಾವ ಶಿಕ್ಷಣವನ್ನು ಕೊಡಬೇಕಾಗಿದೆ ಎಂದು. ಅಲ್ಲದೇ ದಾವೆಯ ನಂತರವು ತನ್ನ ಪುತ್ರ ಅಬ್ಬಾಸನಿಗೆ ಎರಡು ಪತ್ನಿಯರನ್ನು ಹೊಂದಲು ಅನುಮತಿ ನೀಡಿದರು ಏಕೆಂದರೆ ಅವನಿಗೆ ಸಂತಾನವಿರಲಿಲ್ಲ. ಆಗ ಆ ಮಹಿಳೆಯ ಕಿವಿಯಲ್ಲಿ ಇರಾನಿ ಬಹಾಯಿ ಮಹಿಳೆಯೊಬ್ಬರು ಹೇಳಿದರು. ಎರಡನೇ ಪತ್ನಿಗೆ ಬಹಾಉಲ್ಲಾ ತನ್ನ ಸಹೋದರಿಯನ್ನಾಗಿ ಮಾಡಿಕೊಂಡಿದ್ದರು. ಅದೇ ಮಾತನ್ನು ಆ ಬ್ರಿಟಿಷ್ ಮಹಿಳೆ ಉಚ್ಚರಿಸಿದಳು. ಆಗ ನಾನು ಹೇಳಿದೆ. ಬಹಾಉಲ್ಲಾನ ದಾವೆಯ ನಂತರ ಇಬ್ಬರು ಮಹಿಳೆಯರಿಂದ ಸಂತಾನ ಪ್ರಾಪ್ತವಾಗಿದೆ. ಸಹೋದರಿಯಿಂದ ಎಂದಾದರೂ ಸಂತಾನವಾಗುತ್ತದೆಯೇ. ಆಗ ಆಕೆ ಆಶ್ಚರ್ಯಚಕಿತಳಾಗಿ ತನ್ನ ಗೆಳತಿಗೆ ಕೇಳಿದಳು. ದಾವೆಯ ನಂತರ ಎರಡನೇ ಮಹಿಳೆಯಿಂದ ಸಂತಾನವಾಯಿತೆ? ಅವಳು ಹೌದು ಎಂದಾಗ ಸಭೆಯಲ್ಲಿದ್ದವರಿಗೆ ನಗು ತಡೆಯಲಾಗಲಿಲ್ಲ. ಈಗಷ್ಟೇ ಸಹೋದರಿ ಎಂದಿದ್ದರು. ಮತ್ತೀಗ ಆಕೆಗೆ ಅದೇ ಸಮಯದಲ್ಲಿ ಸಂತಾನ ಆಗಿದ್ದನ್ನು ಒಪ್ಪುತ್ತೀರಿ. ಅಂತೂ ಬಹಾಯಿ ಜನರು ಪ್ರತ್ಯೇಕ ದೇಶಗಳಲ್ಲಿ ಪ್ರತ್ಯೇಕ ಕಾನೂನುಗಳನ್ನು ರಚಿಸಿಕೊಳ್ಳುತ್ತಾ ಇದ್ದಾರೆ. ಇದೇ ಪರಿಸ್ಥಿತಿ ಕ್ರೈಸ್ತರದ್ದಾಗಿದೆ. ಅವರ ಮಿಷನರಿ ಗ್ರಂಥಗಳಲ್ಲಿ ಬಹಿರಂಗ ಚರ್ಚೆ ಆಗುತ್ತಿರುತ್ತದೆ. ಪ್ರತಿಯೊಂದು ದೇಶದವರ ಮುಂದೆ ಯಾವ ರೂಪದಲ್ಲಿ ಮಸೀಹ(ಅ) ರವರನ್ನು ಪ್ರಸ್ತುತಪಡಿಸಬೇಕಾಗಿದೆ ಎಂದು. ಪ್ರಾರಂಭದಲ್ಲಿ ಕ್ರೈಸ್ತರಲ್ಲಿ ರೋಮ ದೇಶದವರು ಬೇಡಿಕೆ ಮುಂದಿಟ್ಟರು. ಸಬ್ಬತ್ ದಿವಸ ಶನಿವಾರ ಬದಲಿಗೆ ಭಾನುವಾರ ಆಗಲಿ. ಅದನ್ನು ಕ್ರೈಸ್ತರು ಅವರಿಗೋಸ್ಕರ ಒಪ್ಪಿಕೊಂಡರು. ಮತ್ತು ಶನಿವಾರ ಬದಲಿಗೆ ಭಾನುವಾರನ್ನು ಸಬ್ಬತ್ ಎಂದು ಘೋಷಿಸಿದರು. ಅದರೆ ತಾವು ಇಸ್ಲಾಮ್ ಧರ್ಮವನ್ನು ನೋಡಿ ಪ್ರಾರಂಭದಿಂದ ಇಲ್ಲಿಯವರೆಗೆ ಎಲ್ಲಾ ಶಿಕ್ಷಣವು ಒಂದೇ ಬೇರು ಹೊಂದಿದೆ. ಹೆಚ್ಚು, ಕಡಿಮೆ ಮಾಡುವ ಅವಶ್ಯಕತೆಯೂ ಬರಲಿಲ್ಲ.

**(ತಫ್ಸೀರ್ ಕಬೀರ್, ಸಂಪುಟ-3, ಪುಟ-476).**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800-103-2131**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**
**Love for All, Hatred for None**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅದೇ ವರ್ಷ ನೂರ್‌ಅಫ್ಶಾಂ ಪತ್ರಿಕೆಯ ಒಂದು ಸಂಚಿಕೆಯಲ್ಲಿ ನಿಮ್ಮ ವಯಸ್ಸು 64 ವರ್ಷ ಸಮೀಪವಿದೆ ಎಂದು ಬರೆಯಲಾಗಿತ್ತು. ಅಂದಹಾಗೆ ನಾನು ತುಂಬಾ ಆಶ್ಚರ್ಯಚಕಿತನಾಗಿದ್ದೇನೆ. ಅದರ ಪ್ರಸ್ತಾಪದಿಂದ ಏನು ಪ್ರಯೋಜನ. ನೀವು ನಿಮ್ಮ ವಯಸ್ಸಿನ ಕಾರಣ ಸಾಯಬಹುದೆಂದು ಹೆದರುತ್ತಿದ್ದೀರಾ. ಆದರೆ ಅಲ್ಲಾಹನ ಆಜ್ಞೆ ಹೊರತು ಯಾರೂ ಸಾಯರು ಎಂದು ಯೋಚಿಸುವುದಿಲ್ಲವೇ ಅದಾಗ್ಯೂ ನಾನು ಆಣೆ ವಹಿಸಿಕೊಂಡಿರುತ್ತೇನೆ. ನೀವು ಸಹ ಆಣೆವಹಿಸುವಿರಿ. ಇಬ್ಬರಲ್ಲಿ ಯಾರು ಸುಳ್ಳುಗಾರರಾಗುವರೋ ಅವನು ಲೋಕದ ಮೇಲೆ ಪ್ರಭಾವ ಬೀರಲು ಇಹಲೋಕದಿಂದ ಎತ್ತಲ್ಪಡುವನು. ನೀವು 64 ವಯಸ್ಸಿನವರಾದರೆ ನನ್ನ ವಯಸ್ಸು 60 ಆಗಿರುತ್ತದೆ. ಎರಡು ದೇವರುಗಳ ಯುದ್ಧವಾಗಿದೆ. ಒಂದು ಇಸ್ಲಾಮಿನದ್ದು, ಮತ್ತೊಂದು ಕ್ರೈಸ್ತರದ್ದು ಅದರಲ್ಲಿ ಯಾರು ಸತ್ಯವಂತನು ಮತ್ತು ಸರ್ವಶಕ್ತನಾಗಿರುವನು ಅವನು ಕಂಡಿತ ತನ್ನ ದಾಸನನ್ನು ಅವಶ್ಯವಾಗಿ ರಕ್ಷಿಸಿಕೊಳ್ಳುವನು. ನಿಮ್ಮ ದೃಷ್ಟಿಯಲ್ಲಿ ಮಸೀಹರ ಬಗ್ಗೆ ಏನಾದರೂ ಗೌರವವಿದ್ದರೆ ಅವರು ಮರ್ಯಮರಿಗೆ ಜನಿಸಿರುವರು. ಅವನ ಗೌರವದ ಶಿಫಾರಸ್ಸು ಮುಂದಿಟ್ಟು, ಮತ್ತೆ ನಾನು ನಿಮಗೆ ಏಕದೇವನಾದ ಅಲ್ಲಾಹನ ಆಣೆವಹಿಸಿ ಹೇಳುತ್ತೇನೆ. ನೀವು ಈ ಪತ್ರಿಕೆಯ ಆಶಯದಂತೆ ಸಾರ್ವಜನಿಕ ಸಭೆಯಲ್ಲಿ ಮರಣದ ಶಿಕ್ಷೆ ಬಯಸಿ ಆಣೆವಹಿಸಿ. ಈಗ ನಾವು ನೋಡುತ್ತೇವೆ. ನಿಮಗೆ ಮಸೀಹನ ಗೌರವ ಕುರಿತು ಏನಾದರೂ ಭರವಸೆ ಇದೆಯೋ ಇಲ್ಲವೋ ಎಂದು. ಹೆಚ್ಚು ಏನು ಬರೆಯಲಿ. "ವಸ್ತಲಾಮು ಅಲಾ ಮನಿತ್ತಬಅ ಹುದಾ" (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ-9, ಪುಟ-92)

**ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿ ಆಥಮನು ಅವಶ್ಯವಾಗಿ ಮರಣ ಹೊಂದುವನು.**

ಅದಾಗ್ಯೂ ಆಥಮರು ಭವಿಷ್ಯವಾಣಿಯಲ್ಲಿದ್ದ ಶರತ್ತಿನ ಮೇರೆಗೆ ಪ್ರಯೋಜನ ಪಡೆದಿದ್ದಾರೆ. ಮತ್ತು ಮರಣದಿಂದ ಬಚಾವಾದರು. ಆದರೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ದಿವ್ಯವಾಣಿ ಪ್ರಕಾರ ತನ್ನ ಬರಹಗಳಲ್ಲಿ ಎಲ್ಲಾ ಕಡೆ ಘೋಷಣೆ ಮಾಡಿದರು. ಈ ಅವಕಾಶ ಹೆಚ್ಚು ಸಮಯ ಉಳಿಯುವಂತಿಲ್ಲ ಬಹು ಬೇಗ ಆಥಮನು ತನ್ನ ಮೃತ್ಯುವನ್ನು ಆಹ್ವಾನಿಸಿಕೊಳ್ಳುವನು. ಅಂದಹಾಗೆ ಸತ್ಯವನ್ನು ಮರೆಮಾಚುವ ನಿಮಿತ್ತ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೊನೆಯ ಪತ್ರಿಕೆಯ ಏಳು ತಿಂಗಳ ಒಳಗೆಯೇ ಅಲ್ಲಾಹನು ಆಥಮನನ್ನು ಹಿಡಿದುಕೊಂಡನು.

ಆಥಮನ ಮರಣ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ಭವಿಷ್ಯವಾಣಿಯ ಬಗ್ಗೆ ವಿವರಿಸಿದ ವಿಶ್ವಾಸವರ್ಧಕ ಅಧ್ಯಾಪನೆಗಳು ನಾವು ಈ ಕೆಳಗೆ ನಮೂದಿಸುತ್ತಿದ್ದೇನೆ ಅವರು (ಅ) ನುಡಿದರು.

1) ಈ ಮಾತು ಸತ್ಯವನ್ನು ಬಯಲುಗೊಳಿಸಲು ಸಾಕಾಗುವುದಿಲ್ಲವೇ. ನಾವು ಕೇವಲ ಅಬ್ದುಲ್ಲ ಆಥಮನು ಪರಿಸ್ಥಿತಿಗಳನ್ನು ಪ್ರಸ್ತುತಪಡಿಸಿಲ್ಲ ಬದಲು ಸಾವಿರ ರೂಪಾಯಿಯ ಜಾಹೀರಾತು ಸಹ ನೀಡಿದ್ದೆ. ನೆನಪಿಡಿರಿ. ಅವರು ಈ ಜಾಹೀರಾತನ್ನು ಲೆಕ್ಕಿಸುವವರಲ್ಲ. ಏಕೆಂದರೆ ಅವರು ಸುಳ್ಳುಗಾರರಾಗುವರು. ಅವರು ತಮ್ಮ ಮನದಲ್ಲಿ ಸರಿಯಾಗಿ ಅರಿತುಕೊಂಡವರಾಗಿದ್ದಾರೆ. ಅವರು ಈ ಭಯದಿಂದ ಮರಣದ ಸಮೀಪ ತಲುಪಿದ್ದರು, ಮತ್ತು ನೆನಪಿರಲಿ ಶ್ರೀ ಅಬ್ದುಲ್ಲ ಆಥಮನ ಪರಿಪೂರ್ಣ ಶಿಕ್ಷೆಯ ಅಡಿಗಲ್ಲು ಇಡಲಾಗಿದೆ. ಅದು ಬಹುಬೇಗ ಕೆಲ ಉದ್ಧರಣೆಯಿಂದ ಪ್ರಕಟವಾಗುವುದು. ಅಲ್ಲಾಹನ ಎಲ್ಲಾ ಕಾರ್ಯಗಳು ಸಮತೋಲನವಾಗಿಯೂ ಮತ್ತು ದಯೆಯಿಂದ ಕೂಡಿವೆ. ಕಪಟಿ ಮನುಷ್ಯನ ತರ ವಿನಾಕಾರಣ ಆತುರಪಡುವವನಲ್ಲ.

2) ಇದೀಗ ಆಥಮ ಸಾಹಿಬರು ಆಣೆವಹಿಸಿದರೆ ಅವನ ವಾಗ್ದಾನ ನಿಶ್ಚಿತವಾಗಿಯೂ ಅವನೊಡನೆ ಯಾರು ಸಹಭಾಗಿಯಲ್ಲ, ಅದು ಅಚಲ ವಿಧಿಯಾಗಿದೆ. ಅವರು ಆಣೆವಹಿಸಲಿಲ್ಲ ಎಂದರೂ ಅಲ್ಲಾಹನ ಅವರಿಗೆ ಈ ಅಪರಾಧದ ಶಿಕ್ಷೆ ಕೊಡದೇ ಬಿಡಲಾರನು ಅವರು ಸತ್ಯವನ್ನು ಮರೆಮಾಚಿ ಲೋಕಕ್ಕೆ ವಂಚಿಸಿದ್ದಾರೆ. ಆದರೆ ನಾವು ಅಂತಿಮವಾಗಿ ಈ ಪ್ರಕಾರ ಕೇವಲ ಇಷ್ಟೇ ಹೇಳಬಯಸುವೆನು. ಅಲ್ಲಾಹನು ತನ್ನ ದೃಷ್ಟಾಂತವನ್ನು ನಯವಾದ ರೀತಿಯಲ್ಲಿ ತೋರಿಸಬಯಸುತ್ತಾನೆ. ಅದರಿಂದ ಲೋಕದ ಕಣ್ಣು ತೆರೆಯುವುದು ಮತ್ತು ಅಂಧಕಾರ ದೂರವಾಗುವುದು, ಆ ದಿನಗಳು ಸಮೀಪವಿದೆ ದೂರವಿಲ್ಲ. ಆದರೆ ಆ ಘಳಿಗೆಯ ಅರಿವು ನೀಡಲ್ಪಟ್ಟಾಗ ಅದನ್ನು ಮುದ್ರಿಸಲಾಗುವುದು (ಅದೇ ಪುಟ 114)

**ಭವಿಷ್ಯವಾಣಿ ಪ್ರಕಾರ ಫೇರೋಜಪುರದಲ್ಲಿ 27 ಜುಲೈ 1896 ರಂದು ಆಥಮನು ಮರಣ ಹೊಂದಿದನು.**

ಅಂದ ಹಾಗೆ ಶ್ರೀ ಅಬ್ದುಲ್ಲ ಅಥಮರು 27 ಜುಲೈ 1896 ರಂದು ಫೇರೋಜಪುರದಲ್ಲಿ ನಿಧನಗೊಂಡರು. ಆದುದರಿಂದ ಉಚಿತ ಎಂದು ಭಾವಿಸುದೇನೆಂದರೆ ಜನರಿಗೆ ಆ ಭವಿಷ್ಯವಾಣಿಗಳನ್ನು ಮತ್ತೊಮ್ಮೆ ನೆನಪಿಸಬೇಕು. ಅದರಲ್ಲಿ ಬರೆಯಲಾಗಿತ್ತು. ಆಥಮ ಸಾಹೇಬರು ಆಣೆವಹಿಸಲಿಲ್ಲ ಎಂದಾದರೆ ಅವರ ನಿರಾಕರಣೆಯ ನಿಜವಾದ ಉದ್ದೇಶ ಅಂದರೆ ಉಳಿದಂತಹ ವಯಸ್ಸು ಪಡೆಯ ಬಯಸುವುದು ಖಂಡಿತವಾಗಿಯೂ ಸಾಧಿಸಲಾರರು. ಬದಲು ಅವರ ನಿರ್ಭಯದ ಕಾರಣದಿಂದ ಅವನು ಈ ಲೋಕದಿಂದ ಅತೀ ಬೇಗನೇ ಹೊರಡುವರು. ಹೀಗೆಯೇ ಆಯಿತು ನಮ್ಮ ಪ್ರಕಟಣೆ 30–12–1895ರ ನಂತರ ಏಳು ತಿಂಗಳೊಳಗೆ ಅವರು ನಿಧನರಾದರು. (ಅಂಜಮ್ ಅಥಮ್ ರುಖ್ ಸಂಪುಟ 11 ಪುಟ 1)

ಮೇ 22, 1893 ರಿಂದ ಜೂನ್ 5, 1893 ರವರೆಗೆ ಅಮೃತಸರದ ಮಾಸ್ಟರ್ ಮಾರ್ಟಿನ್ ಕ್ಲಾರ್ಕ್ ಅವರ ನಿವಾಸದಲ್ಲಿ ಹದಿನೈದು ದಿನಗಳ ಕಾಲ ಚರ್ಚೆ ನಡೆಯಿತು ಎಂದು ನಾವು ಈಗಾಗಲೇ ಹೇಳಿದ್ದೇವೆ. ಕ್ರಿಶ್ಚಿಯನ್ನರು ಈ ಚರ್ಚೆಯನ್ನು ಜಂಗೆ ಮುಖದ್ದಸ್(ಪವಿತ್ರ ಸಮರ) ಎಂದು ಹೆಸರಿಸಿದರು. ಸ್ಪಷ್ಟವಾಗಿ ಈ ಸಮರವು ಅಬ್ದುಲ್ಲಾ ಅಥಮ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ನಡುವೆ ಇತ್ತು, ಆದರೆ ವಾಸ್ತವದಲ್ಲಿ ಈ ಮಹಾನ್ ಯುದ್ಧವು ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮದ ನಡುವೆ ಇತ್ತು ಮತ್ತು ಜನರು ಅದನ್ನು ಈ ದೃಷ್ಟಿನಿಂದ ನೋಡಿದರು ಮತ್ತು ಕೇಳಿದರು. ಕ್ರಿಶ್ಚಿಯನ್ನರು ಸಹ ಇದನ್ನು ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮದ ನಡುವಿನ ಯುದ್ಧವೆಂದು ಪರಿಗಣಿಸಿದರು. ಆದ್ದರಿಂದ ಕ್ರಿಶ್ಚಿಯನ್ ಪತ್ರಿಕೆ ಮತ್ತು ಕ್ರಿಶ್ಚಿಯನ್ ಧರ್ಮದ ವಕ್ತಾರರಾಗಿದ್ದ ನೂರ್ ಅಫ್ಷನ್ ಪತ್ರಿಕೆ ಹೀಗೆ ಬರೆಯುತ್ತದೆ:

"ಮಿರ್ಝಾ ಸಾಹಿಬ್ ತಾವು ಮುಲ್‌ಹಿಮ್ ಮತ್ತು ಮಸೀಲೆ ಮಸೀಹ್ ಎಂಬುದರ ಬಗ್ಗೆ ಕ್ರಿಶ್ಚಿಯನ್ನರೊಂದಿಗೆ ಚರ್ಚಿಸಲಿಲ್ಲ, ಆದರೆ ಇಸ್ಲಾಮ್ ಸತ್ಯ ಮತ್ತು ಖುರ್‌ಆನ್ ಅಲ್ಲಾಹನ ಗ್ರಂಥವಾಗಿದೆ ಎಂದು ಸಾಬೀತು ಪಡಿಸಲು ಮತ್ತು ಕ್ರೈಸ್ತ ಧರ್ಮವನ್ನು ರದ್ದುಗೊಳಿಸಲು ಹಾಗೂ ಆ ಚರ್ಚೆಯ ಕೊನೆಯಲ್ಲಿ ಅವರು ಅದನ್ನು ಸಾಕ್ಷ್ಯವಾಗಿ ಮಾಡಿದರು ಅವರ ಧರ್ಮವು ಸರಿಯಾಗಿದೆ ಮತ್ತು ಅಲ್ಲಾಹನಿಂದ ಬಂದಿದೆ ಎಂದು" (ನೂರೆ ಅಫ್‌ಶಾನ್, 20–12–1894) (ತಆರುಫ್ ಅನ್ವಾರುಲ್ ಉಲೂಮ್, ಸಂಪುಟ–9, ಜಲಾಲುದ್ದೀನ್ ಶಮ್ಸ್ ಸಾಹಿಬ್ ಪುಟ–4)

ಆದರೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮದ ನಡುವಿನ ಈ ಸಮರದಲ್ಲಿ ಮುಸ್ಲಿಮರ ಪಾತ್ರವು ಅತ್ಯಂತ ದುರದೃಷ್ಟಕರವಾಗಿತ್ತು. ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಈ ಸಮರದಲ್ಲಿ ಇಸ್ಲಾಮ್ ಧರ್ಮವನ್ನು ಜೀವಂತ ಧರ್ಮ, ಪ್ರವಾದಿ(ಸ) ಅವರನ್ನು ಜೀವಂತ ರಸೂಲ್ ಹಾಗೂ ಪವಿತ್ರ ಖುರ್‌ಆನನ್ನು ಜೀವಂತ ಗ್ರಂಥ ಎಂದು ಸಾಬಿತ್ ಪಡಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ವತಃ ಹೇಳುತ್ತಾರೆ: "ನನ್ನ ಚರ್ಚೆಗಳು ಇಸ್ಲಾಮ್ ಧರ್ಮದ ಸಮರ್ಥನೆಯಲ್ಲಿದ್ದವು ನನ್ನ ವಾಗ್ದಾತ್ತ ಮಸೀಹನು ಎಂಬ ದಾವೆಯ ಬಗ್ಗೆ ಚರ್ಚೆ ಇರಲಿಲ್ಲ." ಆದರೆ ನನ್ನ ವಿರೋಧಿ ಮೌಲವಿಗಳು ಸಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ವಿರೋಧದಲ್ಲಿ ಇಸ್ಲಾಮ್ ಧರ್ವವನ್ನೇ ಸೋತಿಹೋದ ಧರ್ಮ ಎಂದು ಸಾಬೀತು ಪಡಿಸಿದರು. ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಭವಿಷ್ಯವಾಣಿಗಳನ್ನು ಆಕ್ಷೇಪಿಸಿದರು ಮತ್ತೆ ಹೇಳಿದರು ಭವಿಷ್ಯವಾಣಿ ನಿಜವಾಗಲಿಲ್ಲ. ನಿಜ ಸಂಗತಿ ಏನೆಂದರೆ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ದುಃಖ ನೀಡುವುದಲ್ಲಿ ಈ ಮೌಲವಿಗಳು ಕ್ರೈಸ್ತರಿಂದ ಮುಂದೆವರಿದಿದ್ದಾರೆ. ಈ ನಿಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕೆಲವು ಉಲ್ಲೇಖಗಳನ್ನು ನಾವು ಕೆಳಗೆ ಪ್ರಸ್ತುತಪಡಿಸುತ್ತೇವೆ:

**ಅರೆ–ಕ್ರಿಶ್ಚಿಯನ್ನರ ಅಂದರೆ ವಿರೋಧಿ ಮುಸ್ಲಿಮರ ಕುಸಿದ ಪರಿಸ್ಥಿತಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಕೆಲವು ಮುಸ್ಲಿಮರು ಅವರನ್ನು ಅರೆ–ಕ್ರಿಶ್ಚಿಯನ್ನರು ಎಂದು ಕರೆಯಬೇಕು ಅವರು ಅಬ್ದುಲ್ಲಾ ಅಥಮ್ ಹದಿನೈದು ತಿಂಗಳ ವರೆಗೆ ಮೃತಪಟ್ಟಲಿಲ್ಲ ಎಂದು ಸಂತೋಷಗೊಳ್ಳುತ್ತಾರೆ ಮತ್ತು ಅವರು ಸಂತೋಷಯಲ್ಲಿ ತಾಳ್ಮೆ ವಹಿಸಲಿಲ್ಲ ಕೊನೇಗೆ ಅವರು ಒಂದು ಪ್ರಕಟಣೆಯನ್ನು ಹೊರಡಿಸಿದರು ಮತ್ತು ತಮ್ಮ ಅಭ್ಯಾಸದನುಸಾರ ಅವರು ಕೆಡುಕನ್ನು ವ್ಯಕ್ತಪಡಿಸಿದರು ಮತ್ತು ನನೊಂದಿಗೆ ಇದ್ದ ದ್ವೇಷದಿಂದ ಅವರು ಇಸ್ಲಾಮ್ ಧರ್ಮದ ಮೇಳೆ ಹಲ್ಲೆ ನಡೆಸಿದರು. ಏಕೆಂದರೆ ನನ್ನ ಚರ್ಚೆಗಳು ಇಸ್ಲಾಮ್ ಧರ್ಮದ ಸಮರ್ಥನೆಯಲ್ಲಿದ್ದವು ನನ್ನ ವಾಗ್ದಾತ್ತ ಮಸೀಹಿನ ದಾವೆಯ ಬಗ್ಗೆ ಚರ್ಚೆ ಇರಲಿಲ್ಲ. (ಅನ್ವರ್–ಉಲ್–ಇಸ್ಲಾಂ, ಸಂಪುಟ 9, ಪುಟ 24)

ಅವರು(ಅ) ಮತ್ತೆ ಹೇಳುತ್ತಾರೆ: ಎದುರಾಳಿ ಮೌಲ್ವಿಗಳು ನನ್ನನ್ನು ಸುಳ್ಳುಗಾರ ಎಂದು ಸಾಬೀತುಪಡಿಸಲು ಅಲ್ಲಾಹ್ ಮತ್ತು ಪ್ರವಾದಿ(ಸ)ರವರ ಗೌರವದ ಬಗ್ಗೆ ಯಾವುದೇ ಗಮನ ಹರಿಸಲಿಲ್ಲ ಮತ್ತು ಈ ಚರ್ಚೆಯಲ್ಲಿ ನನ್ನ ಸೋಲನ್ನು ಒಪ್ಪಿಕೊಂಡರು ಮತ್ತು ಸೋಲನುಭವಿಸಿದ ಸ್ಪಷ್ಟ ಫಲಿತಾಂಶದಿಂದ ವಿರೋಧಿ ಪಕ್ಷಗಳ ಕೈಗೆ ಪರಿಸ್ಥಿತಿ ಸಿಲುಕುತ್ತದೆ ಮತ್ತು ಮಿಯಾಂ ಸನಾಉಲ್ಲಾಹ್ ಮತ್ತು ಸಅದುಲ್ಲಾಹ್ ಮತ್ತು ಅಬ್ದುಲ್ ಹಖ್ ಮತ್ತಿತರರು ಕ್ರೈಸ್ತರ ಪ್ರಾಬಲ್ಯವನ್ನು ಒಪ್ಪಿಕೊಂಡಾಗ, ಅವರು ತಮ್ಮ ಪ್ರಕಟಣೆಗಳಲ್ಲಿ ಕ್ರೈಸ್ತರ ಪರಿಸ್ಥಿರಿಯ ಮೇಳೆ ಏಕೆ ವಿಷಾಧವ್ಯಕ್ತ ಪಡಿಸಿದರು ಅಂದರೆ ಅವರು ಇಸ್ಲಾಮ್ ಧರ್ಮದ ವಿರೋಧದಲ್ಲಿ ಇದನ್ನು ವಾದವಾಗಿದೆ ಎಂದು ಹೇಳಿದರು. (ಅನ್ವರ್–ಉಲ್–ಇಸ್ಲಾಂ, ಸಂಪುಟ–9, ಪುಟ–24)

**ಇಂತಹ ಚರ್ಚೆಗಳಲ್ಲಿ ಯಾವತ್ತಾದರು ಪಾದ್ರಿಗಳು ಮುಸ್ಲಿಮರೊಂದಿಗೆ ಸೇರಿದ್ದಾರೆಯೇ?**

**ಹಾಗಾದರೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮದ ನಡುವಿನ ಈ ಯುದ್ಧದಲ್ಲಿ ಕ್ರಿಶ್ಚಿಯನ್ನರೊಂದಿಗೆ ಹೋರಾಡಿದ ಈ ಮೌಲವಿಗಳು ಹೇಗಿದ್ದಾರೆ?**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಕ್ರೈಸ್ತ ಧರ್ಮವನ್ನು ಬೆಂಬಲಿಸುವ ಅಥವಾ ವ್ಯಕ್ತಿಯ ದೃಷ್ಟಿಯಲ್ಲಿ ಆ ಧರ್ಮವನ್ನು ಕಿತ್ತುಹಾಕುವ ಚರ್ಚೆಯಲ್ಲಿ ನಿಮ್ಮೊಂದಿಗೆ ಬಂದ ಒಬ್ಬ ಪಾದ್ರಿಯ ಬಗ್ಗೆ ನೀವು ಎಂದಾದರೂ ಕೇಳಿದ್ದೀರಾ? ಬದಲಿಗೆ ಅವರು ತಮ್ಮಲ್ಲಿರುವ ಅನೇಕ ಭಿನ್ನಭಿಪ್ರಾಯಗಳ ಹೊರತೂ ಅವರ ತಮ್ಮ ಬಗ್ಗೆ ಏನನ್ನು ವ್ಯಕ್ತಪಡಿಸುವುದಿಲ್ಲ. ಮತ್ತೆ ನೀವು ನೀವು ಕೆಲವು ಸ್ವಾರ್ಥಿ ಮೌಲವಿಳನ್ನು ಅನುಸರಿಸಿ ಮತ್ತು ಧಾರ್ಮಿಕ ವಿಷಯದಲ್ಲಿ ಪಾದರಿಗಳನ್ನು ಬೆಂಬಲಿಸಿದ್ದೀರಿ ಮತ್ತು ಬೇರೆ ಯಾವುದೇ ಧರ್ಮದಲ್ಲಿ ಇಲ್ಲದ ರೀತಿಯಲ್ಲಿ ಸತ್ಯದ ಜನರನ್ನು ಅವಮಾನಿಸಿದ್ದೀರಿ. ಹಾಗಾಗಿ ನಾನು ಈಗಲೂ ಪಶ್ಚಾತ್ತಾಪ ಪಡಲು ಸಲಹೆ ನೀಡುತ್ತೇನೆ ಮತ್ತು ಈ ಭವಿಷ್ಯವಾಣಿಯನ್ನು ಶುದ್ಧ ಹೃದಯದಿಂದ ಮತ್ತು ನಿಸ್ವಾರ್ಥ ಕಣ್ಣಿನಿಂದ ನೋಡಿ, ಮತ್ತು ಎಲ್ಲಾ ವಿಷಯಗಳನ್ನು ಒಂದೇ ದೃಷ್ಟಿಯಿಂದ ಕಲ್ಪಿಸಿಕೊಳ್ಳುವ ಮೂಲಕ, ನಿಮ್ಮ ಮೊದಲ ಆತುರಕ್ಕೆ ಪರಿಹಾರವಾಗುವ ನಿಜವಾದ ಅಭಿಪ್ರಾಯವನ್ನು ತೋರಿಸಿ. (ಝಿಯಾ ಉಲ್‌ಹಖ್, ರೂಹಾನಿ ಖಝಾಈನ್, ಸಂಪುಟ–9, ಪುಟ 277)

**ಪ್ರವಾದಿ(ಸ) ಅವರನ್ನು ಮುಸ್ಲಿಮರು ಯಾವ ಮುಖವನ್ನು ತೋರಿಸುತ್ತಾರೆ?**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಈಗ ಕ್ರಿಶ್ಚಿಯನ್ನರೊಂದಿಗೆ ಬೆರೆಯುತ್ತಿರುವ ಜಾತ್ಯತೀತ ಮೌಲವಿಗಳು ನಮಗೆ ಉತ್ತರ ನೀಡಿರಿ ಅವರು ಏಕೆ ನಮ್ಮ ದ್ವೇಷಕ್ಕಾಗಿ ತಮ್ಮ ಮುಖವನ್ನು ಕಪ್ಪಗಾಗಿಸಿದರು. ಅವರು ಯಾವುದೇ ಮುಖವಿಲ್ಲದೆ ಅನ್ಯಾಯವಾಗಿ ಸೇರ್ಪಡೆಗೊಂಡ ಪ್ರವಾದಿ(ಸ) ರವರಿಗೆ ಅದೇ ಮುಖವನ್ನು ನಾಳೆ ತೋರಿಸುತ್ತಾರೆಯೇ? ಆಥಮ್ ಅವರಿಗೆ ಸತ್ಯ ಎಂದು ಅವರು ಪ್ರತಿಜ್ಞೆ ಮಾಡಬಹುದೇ? ಅಂತಹ ಯುದ್ಧದ ಬೇಡಿಕೆಯಲ್ಲಿ ಆಥಮನು ಆಣೆ ಮಾಡದಿದ್ದಿರುವುದು ಒಂದು ರೀತಿಯ ಸಾವಾಗಿತ್ತು. ಆತನು ನಿಸ್ಸಂದೇಹವಾಗಿಯು ಸಾಕ್ಷ್ಯದೊಂದಿಗೆ ನಾಶವಾದನು, ಮತ್ತು ಅವನು ಹೊಣೆಗಾರನಾದ ಪುರಾವೆಗಳ ಹೊರೆ ಅವನಿಂದ ಮುಕ್ತವಾಗಲಿಲ್ಲ, ಮತ್ತು ಸಂತೋಷದ ನಂತರ ದೈಹಿಕ ಸಾವನ್ನು ಸಹ ತಪ್ಪಿಸಲಾಗಲಿಲ್ಲ. (ಝಿಯಾ ಉಲ್‌ಹಖ್, ಸಂಪುಟ–9, ಪುಟ–285)

**ಓ ದುಷ್ಟ ಮೌಲ್ವಿಗಳೆ! ನೀವು ಮುಸ್ಲಿಮರನ್ನು ಅವಿಶ್ವಾಸಿಗಳನ್ನಾಗಿ ಮಾಡಿದ್ದೀರಿ! ನೀವು ಕ್ರಿಶ್ಚಿಯನ್ನರನ್ನು ಸಮರ್ಥಿಸಿದ್ದೀರಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಓ ದುಷ್ಟ ಮೌಲ್ವಿಗಳೆ ಮತ್ತು ಅವರ ಅನುಯಾಯಿಗಳೆ........ ನಿನ್ನ ಸ್ಥಿತಿಯ ಮೇಲೆ ಆಗಾಧುಂಟಾಗುತ್ತದೆ! ನೀವು ಮೊದಲೇ ಸತ್ತಿದ್ದರೆ ಏನು ಚೆನ್ನಾಗಿರುತ್ತಿತ್ತು. ನೀವು ಮುಸ್ಲಿಮರನ್ನು ನಂಬಿಕೆಯಿಲ್ಲದವರನ್ನಾಗಿ ಮಾಡಿದ್ದೀರಿ! ನೀವು ಕ್ರಿಶ್ಚಿಯನ್ನರನ್ನು ಸಮರ್ಥಿಸಿಕೊಂಡಿದ್ದೀರಿ, ಮತ್ತು ನೀವು ಪಾದ್ರಿಗಳೊಂದಿಗೆ ಬೆರೆತಿದ್ದೀರಿ ಮತ್ತು ಕೊನೆಯಲ್ಲಿ ಪ್ರತಿಯೊಂದು ವಿಷಯವೂ ಸುಳ್ಳು ಎಂದು ಬದಲಾಯಿತು. ಇದು ಬುದ್ಧಿಶಕ್ತಿ ಅಥವಾ ಉದಾತ್ತತೆ ಅಥವಾ ನಂಬಿಕೆಯ ವಿಷಯವೇ? (ಝಿಯಾಉಲ್ ಹಖ್, ರೂಹಾನಿ ಖಝಾಈನ್, ಸಂಪುಟ–9 ಪುಟ–291)

ನಮ್ಮ ಮೌಲವಿಗಳು ಮತ್ತು ಪತ್ರಕರ್ತರು ಯಾವುದಕ್ಕೂ

ಪ್ರಾಮಾಣಿಕವಾಗಿ ಮತ್ತು ಬೆಂಬಲಿಸುವ ಉತ್ಸಾಹವನ್ನು ಹೊಂದಿದ್ದರೆ, ಅವರು ಅಂತಹ ಆಧಾರರಹಿತ ಅಪಪ್ರಚಾರದ ಮೇಲೆ ಅವನನ್ನು (ಅಂದರೆ ಅಥಮ್‌ನನ್ನು) ಹಿಡಿಯುತ್ತಿದ್ದರು ಮತ್ತು ಈ ಕಪಟ ಜಾತ್ಯತೀತವಾದಿ ಈ ಸುಳ್ಳನ್ನು ಸುಮ್ಮನೆ ಕಟ್ಟಿಕೊಟ್ಟಿದ್ದಾನೆಂದು ಅರ್ಥಮಾಡಿಕೊಂಡಿದ್ದರಿಂದ ಅವನು ಮರೆಮಾಡಲು ಸಾಧ್ಯವಾಯಿತು ಈ ವ್ಯಾಖ್ಯಾನಗಳಿಂದ ಅವನು ಮರೆಮಾಡಲು ಸಾಧ್ಯವಿಲ್ಲ ಎಂಬ ಭಯವಿತ್ತು. ಆದರೆ ಈ ಕುರುಡು ಮೌಲವಿಗಳು ಮತ್ತು ಅಜ್ಞಾನಿ ಪತ್ರಕರ್ತರು ತಮ್ಮ ಸ್ವಂತ ಮನೆಯನ್ನು ಕೆಡವಲು ಹುಚ್ಚು ಪ್ರಾಣಿಗಳಂತೆ ಎದ್ದರು. (ಅದೇ 296)

**ಯಹೂದಿ ಗುಣಗಳುಳ್ಳ ಮುಸ್ಲಿಮರು ದಜ್ಜಾಲ್‌ನೊಂದಿಗೆ ಇರುವರು**

ಈ ಪಾದ್ರಿಗಳು ದಜ್ಜಾಲ್‌ರು ಎಂದು ನಾವು ಸಾಬೀತುಪಡಿಸಿದ್ದೇವೆ. ದಜ್ಜಾಲ್ನೊಂದಿಗೆ ಬೆರತಿರುವವರು, ಅವರು ಸುಮಾರು ಎಪ್ಪತ್ತು ಸಾವಿರದ ದಜ್ಜಾಲ್‌ಗಳೊಂದಿಗೆ ಇರುತ್ತಾರೆ ಎಂದು ಸಹೀಹ್ ಮುಸ್ಲಿಂನಲ್ಲಿ ಹದೀಸ್ ವರದಿಯಾಗಿದೆ. ಅವರೊಂದಿಗೆ ಇರುವುದು ಎಂದರೆ ಅವರ ಮಾತುಗಳನ್ನು ಸಮರ್ಥಿಸುವುದು ಎಂದರ್ಥ ಮತ್ತು ಹದೀಸಿನಲ್ಲಿ ಸ್ಪಷ್ಟವಾಗಿ ಹೇಳಲಾಗದೆ. ಅಂದರೆ ಆ ಯಹೂದಿಯರು ನಿಜವಾಗಿಯೂ ಮುಸ್ಲಿಮರಾಗಿರುತ್ತಾರೆ ಎಂದು ಆದರೆ ಆದರೆ ಯಹೂದಿಗಳಂತೆ ಅವರ ತಪ್ಪುಗಳಿಗೆ ಅಂಟಿಕೊಳ್ಳುತ್ತಾರೆ ಮತ್ತು ಬಹಿರಂಗವಾಗಿ ವಾಹತನಾಡುತ್ತಾರೆ ಆದ್ದರಿಂದ ಅವರನ್ನು ಯಹೂದಿಗಳು ಎಂದು ಕರೆಯಲಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಅನುಸರಿಸುತ್ತದೆ ಎಂದು ಹದೀಸ್‌ನಲ್ಲಿ ಹೇಳಲಾಗಿದೆ. ಪಿತೂರಿ ಇದ್ದಾಗ ಮಾತ್ರ ಈ ಯಹೂದಿಗಳು ದಜ್ಜಾಲ್ಗೆ ಒಳಪಡುತ್ತಾರೆ ಮತ್ತು ಮುಸ್ಲಿಮರು ಕ್ರಿಶ್ಚಿಯನ್ನರೊಂದಿಗೆ ಎದುರಾಗುತ್ತಾರೆ. (ಅನ್ವರ್-ಉಲ್-ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ-9, ಪುಟ-45)

**ಮುಸ್ಲಿಮರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಲಹೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಮುಸ್ಲಿಂ ವಿರೋಧಿಗಳು ಸರ್ವಶಕ್ತನಾದ ಅಲ್ಲಾಹನಿಗೆ ಭಯಪಡಬೇಕು ಮತ್ತು ಇತರ ಖೌಮುಗಳಿಗೆ ಪಕ್ಷಪಾತ ಹಾಗೂ ನಿರಾಕರಣೆಯಲ್ಲಿ ಸೇರಬಾರದು ಏಕೆಂದರೆ ಇತರ ಖೌಮ್ಮುಗಳು ಅಲ್ಲಾಹನ ಸುನ್ನತ್ತಿನ ಬಗ್ಗೆ ಮತ್ತು ಪದ್ಧತಿಗಳ ಬಗ್ಗೆ ತಿಳಿದಿರುವುದಿಲ್ಲ ಅಲ್ಲಾಹನ ಪರೀಕ್ಷೆಗಳ ಬಗ್ಗೆ ತಿಳಿದಿಲ್ಲ ಆದರೆ ಇಸ್ಲಾಮಿ ಬೋಧನೆಗಳನ್ನು ಪಡೆದವರು ಚನ್ನಾಗಿ ತಿಳಿದಿದ್ದಾರೆ ಏಕೆಂದರೆ ಅಲ್ಲಾಹನ ಭವಿಷ್ಯವಾಣಿಯಲ್ಲಿ ಅವನ ಷರತ್ತುಗಳು ಒಳಪಟ್ಟಿರುತ್ತದೆ, ಆದರೆ ಕೆಲವೊಮ್ಮೆ ಅಲ್ಲಾಹನು ಅಂತಹ ಪರಿಸ್ಥಿತಿಗಳಿಗೆ ಬದ್ಧನಾಗಿರುತ್ತಾನೆ, ಅದು ಭವಿಷ್ಯವಾಣಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿರುವುದಿಲ್ಲ, ಇದರಿಂದ ಅವನು ತನ್ನ ದಾಸನನ್ನು ಪರೀಕ್ಷಿಸುವನು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ-9, ಪುಟ-12)

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಓದುಗರ ಸೇವೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮತ್ತೊಂದು ಪಂಥಾಹ್ವಾನವನ್ನು ಪ್ರಸ್ತುತಪಡಿಸುತ್ತೇವೆ.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ನನಗೆ ತಿಳಿಸಿರಿ. ನಿಮ್ಮ ವೈಯಕ್ತಿಕ ಅಭಿಲಾಷೆ ಇದ್ದರೆ ಅದು ಬೇರೆ ವಿಷಯ. ತೀರ ಅಗತ್ಯವಿರುವ ಯಾವುದಾದರೂ ಮೂಲಭೂತ ಸಮಸ್ಯೆ, ಅದು ಖುರ್‌ಆನ್‌ನಲ್ಲಿ ಇಲ್ಲ ಎಂದು ನೀವು ಭಾವಿಸುವುದಾದರೆ ತಿಳಿಸರಿ.

* ಮಹಿಳೆಯು ಹೇಳಿದರು. ಇಂತಹುದು ಯಾವುದೂ ಇಲ್ಲ. ನಾನು ಯೋಚಿಸುವುದೇನೆಂದರೆ ಜನರು ತಾವು ನಡೆಯುವ ಧರ್ಮವನ್ನು ಏಕೆ ಬದಲಿಸುವುದಿಲ್ಲ. ಅಭಿಪ್ರಾಯದಲ್ಲಿ ಜನರು ಯಾವುದೇ ಧರ್ಮದಲ್ಲಿ ನಡೆಯುವವರಾಗಲಿ. ಅವರಿಗೆ ಬದಲಿಸುವ ಹಕ್ಕಿರಬೇಕು. ಆಗ ಹುಝೂರ್ ಹೇಳಿದರು. ಆದರೆ ಪ್ರಶ್ನೆಯಿರುವುದು ಯಾವುದೇ ತರಹದ ಬದಲಾವಣೆಯ ಅಗತ್ಯವೇನಿದೆ? ಯಾವುದೇ ಅರ್ಥ ವ್ಯವಸ್ಥೆಯ ಸಮಸ್ಯೆ ಇದ್ದರೆ ಆ ಬಗ್ಗೆ ಖುರ್‌ಆನ್ ಬೆಳಕು ಚೆಲ್ಲಲಿಲ್ಲ. ಹಾಗೂ ಯಾವುದೇ ವೈಜ್ಞಾನಿಕ ದೃಷ್ಟಿಕೋನದ ಬಗ್ಗೆ ಪವಿತ್ರ ಖುರ್‌ಆನ್ ವಿವರಿಸಲಿಲ್ಲ ಎಂದಾದರೆ ಸರಿ. ಅದೇ ರೀತಿ ನಿಮಗೆ ಕೆಲವು ಸಾಮಾಜಿಕ ಸಮಸ್ಯೆಗಳಿವೆ, ಗೃಹ ಸಮಸ್ಯೆಗಳಿವೆ. ಅದರ ವಿವರ ಪವಿತ್ರ ಖುರ್‌ಆನ್‌ನಲ್ಲಿ ಇಲ್ಲ ಎಂದಾರೆ ಸರಿ. ಆದರೆ ಇವೆಲ್ಲ ಸಮಸ್ಯೆಗಳ ವಿವರ ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿವೆ. ಪವಿತ್ರ ಖುರ್‌ಆನ್ ಅದರ ಪರಿಹಾರವನ್ನು ಸೂಚಿಸಿದೆ. ಹೀಗಿರುವಾಗ ಬದಲಿಸುವ ಅಗತ್ಯವಾದರೂ ಏಕಿದೆ?

ಹುಝೂರೆ ಅನ್ವರ್(ಅಬಿಅ) ನುಡಿದರು. ಕೆಲ ಅವಧಿ ನಂತರ ಬದಲಾಣೆ ತರುವ ಅಗತ್ಯವಿದೆ ಎನ್ನಲು. ಇದೇನು ಮಾನವ ಸೃಷ್ಟಿಸಿದ ಕಾನೂನಲ್ಲ, ಯಾವುದೆ ದೇಶದ ಸಂಸತ್ತು ನಿರೂಪಿಸಿದ ಕಾನೂನಲ್ಲ. ಆದುದರಿಂದ ನಮ್ಮ ವಿಶ್ವಾಸವೇನೆಂದರೆ ಈ ಗ್ರಂಥವು ಅಲ್ಲಾಹನು ಅವತರಿಸಿದ್ದಾನೆ. ಆದ ಕಾರಣ ಯಾವ ಬದಲಾವಣೆಯ ಅವಶ್ಯಕತೆ ಇಲ್ಲ. ಈ ಗ್ರಂಥದ ಬರಹ ಕೂಡ ಬದಲಿಸುವ ಅವಶ್ಯಕತೆ ಇರುವುದಿಲ್ಲ. ಕೇವಲ ಮಾತು ಪವಿತ್ರ ಖುರ್‌ಆನ್‌ನ್ನು ಗ್ರಹಿಸುವುದಾಗಿದೆ. ನೀವು ಪವಿತ್ರ ಖುರ್‌ಆನ್‌ನ್ನು ಸರಿಯಾಗಿ ತಿಳಿದವರಾದರೆ ನೀವು ಅದೇ ವಚನಗಳಿಂದ ಹಲವು ಅರ್ಥಗಳನ್ನು ಮತ್ತು ಚಿಂತನೆಗಳನ್ನು ಪಡೆದುಕೊಳ್ಳಬಹುದು. ಅದು ನಿಮ್ಮ ತಿಳುವಳಿಕೆಯ ಮೇಲೆ ನಿರ್ಭರವಾಗಿದೆ.

* ಮಹಿಳೆಯು ಹೇಳಿದಳು. ನನ್ನ ಇನ್ನೊಂದು ಪ್ರಶ್ನೆ ಇದೆ. ನೀವು ಭಾಷಣದಲ್ಲಿ ವಿವರಿಸಿದ್ದಿರಿ. ಧರ್ಮದಿಂದ ದೂರವಾದ ಯೂರೋಪಿನ ಜನರು ತೃಪ್ತರಾಗಿಲ್ಲ. ಅವರು ಅಸುಂತಷ್ಟರಾಗಿದ್ದಾರೆ. ಆದರೆ ನಾನು ಸ್ವಯಂ ಧರ್ಮದ ಮೇಲೆ ನಡೆದುಕೊಳ್ಳುವುದಿಲ್ಲ. ಆದರೆ ನಾನು ಎಲ್ಲ ರೀತಿಯಿಂದ ತೃಪ್ತಳಾಗಿದ್ದೇನೆ.

ಹುಝೂರ್ ಅನ್ವರ್(ಅಬಿಅ) ಹೇಳಿದರು. ನೂರಕ್ಕೆ ನೂರು ಜನರು ಹೀಗಿದ್ದಾರೆಂದು ನಾನು ಹೇಳಿರಲಿಲ್ಲ. ನೀವು ಯಾವುದೇ ವೈಜ್ಞಾನಿಕ ಸಂಶೋಧನೆ ಮಾಡಲು ಹೊರಟಾಗ ಅದರ 75% ಪರಿಣಾಮ ಸಾರ್ಥಕವಾಗಿರುತ್ತದೆ ಆಗ ನೀವು ಹೇಳುವುದು ಪರಿಣಾಮ ಸಾರ್ಥಕವಾಗಿದೆ ಎಂದು. ಕೆಲ ಸಮಯದಲ್ಲಿ ವಿಜ್ಞಾನಿಗಳು 65% ಪರಿಣಾಮ ಸಾರ್ಥಕವಾದುದನ್ನು ನೋಡಿಯೇ ಹೇಳುತ್ತಾರೆ. ಪರಿಣಾಮ ಸಂತೋಷಕರವಾಗಿದೆ ಎಂದು. ಅಂದ ಹಾಗೆ ನಾನು ಅದೇ ನೆಲೆಯಲ್ಲಿ ಯೂರೋಪಿನ ಜನರು ತೃಪ್ತರಾಗಲಿಲ್ಲ ಅಂದದ್ದು. ಆ ಕಾರಣದಿಂದ ಖಿನ್ನತೆಗೆ ಒಳಗಾಗಿದ್ದಾರೆ. ನೀವು ಸ್ವಯಂ ಎಲ್ಲೆಡೆ ಖಿನ್ನತೆ ಕಾಣಬಹುದು. ನಿಮಗೆ ಸಂಪೂರ್ಣ ರೀತಿಯಲ್ಲಿ ತೃಪ್ತಿಯಿದ್ದರೆ ಅದು ಒಳ್ಳೆಯದೇ. ಆದರೆ ನೀವು ಕೆಲವೊಮ್ಮೆ ನನ್ನ ಈ ಆಕಾಂಕ್ಷೆಗಳು ಪೂರ್ಣಗೊಂಡಿಲ್ಲ ಎಂದು ತೋಡಿಕೊಂಡರೆ ನೀವು ತೃಪ್ತರಾಗಿರಿ ಎಂದು ಹೇಳಲು ಹೇಗೆ ಸಾಧ್ಯ? ನನ್ನ ಮಾತಿನ ತಾತ್ಪರ್ಯವೇನೆಂದರೆ ಪಶ್ಚಿಮ ದೇಶಗಳ ಆರ್ಥಿಕ ಸ್ಥಿತಿಯೂ ಕೆಲವು ಆಫ್ರಿಕನ್ ಮತ್ತು ಏಷಿಯನ್ ದೇಶಗಳಿಂದಲೂ ಎಷ್ಟೋ ಉತ್ತಮವಾಗಿದ್ದರು ಆತ್ಮಹತ್ಯೆ ಮಾಡಿಕೊಳ್ಳವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ನನ್ನ ಹೇಳಿಕೆಯ ತಾತ್ಪರ್ಯವಾಗಿತ್ತು.

* ಮಹಿಳೆಯು ಕೇಳಿದರು. ಹಾಗಾದರೆ ಹುಝೂರ್ ಅವರ ದೃಷ್ಟಿಯಲ್ಲಿ ಖಿನ್ನತೆಯ ಪರಿಹಾರ ಕೇವಲ ಧರ್ಮದಲ್ಲಿ ಇದೆಯೇ?

ಆಗ ಹುಝೂರ್ ಅನ್ವರ್ (ಅಬಿಅ) ಹೇಳಿದರು. ನನ್ನ ಉದ್ದೇಶವೆಂದರೆ ನೀವು ನಿಜರೂಪದಲ್ಲಿ ಧರ್ಮದ ಪ್ರಕಾರ ನಡೆದುಕೊಂಡರೆ ನಿಮಗೆ ನಿಜವಾಗಿಯೂ ಯಥಾರ್ಥ ನೆಮ್ಮದಿ ದೊರಕುವುದು. ಆಗ ಆ ಮಹಿಳೆ ಹೇಳಿದಳು. ನಾನಂತೂ ಅಂತಹ ಯಾವನೇ ವ್ಯಕ್ತಿಯನ್ನು ಕಂಡಿಲ್ಲ.

ಆಗ ಹುಝೂರ್ ಹೇಳಿದರು. ನಾನು ಅರಿತಿದ್ದೇನೆ. ನನ್ನ ಸ್ವಯಂ ಅನುಭವವಿದೆ. ನಿಜ ಹೇಳಬೇಕಾದರೆ ನೀವು ಎಲ್ಲವನ್ನು ಲೌಕಿಕ ದೃಷ್ಟಿಯಿಂದ ನೋಡುತ್ತೀರಿ. ನಾನು ಎಲ್ಲವನ್ನು ಧಾರ್ಮಿಕ ದೃಷ್ಟಿಯಿಂದ ನೋಡುತ್ತೇನೆ.

* ಅನಂತರ ಕ್ರೊವೇಷಿಯನ್ ಮಹಿಳೆ ಹೇಳಿದಳು. ನನಗೆ ಇಸ್ಲಾಮ್ ಅಥವಾ ಅಹ್ಮದಿಯಾ ಜಮಾಅತ್‌ನೊಂದಿಗೆ ಯಾವ ಸಂಬಂಧವೂ ಇಲ್ಲ. ಇದು ನನ್ನ ಪ್ರಥಮ ಅನುಭವವಾಗಿದೆ. ಇಸ್ಲಾಮಿ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸುತ್ತಿದ್ದೇನೆ. ನಾನು ವೈಯಕ್ತಿಕವಾಗಿ ತಮಗೆ ಮತ್ತು ಅಹ್ಮದಿಯಾ ಜಮಾಅತಿಗೆ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ನಾನು ಮತ್ತು ನನ್ನ ಸಂಗಡಿಗರು ಇಲ್ಲಿ Documentry film ತಯಾರಿಸಲು ಬಂದಿದ್ದೇವು.

ಹುಝೂರ್ ಅನ್ವರ್(ಅಬಿಅ) ನುಡಿದರು. ಧರ್ಮವನ್ನು ಅನುಸರಿಸುವವರ ಶಾಂತಿಗೆ ಕಾರಣ ಇಲ್ಲಿ ನೆರೆದಿರುವ 36 ಸಾವಿರ ಜನರೆ ಸಾಕ್ಷ್ಯವಾಗಿದ್ದಾರೆ. ಇಲ್ಲಿ ನೆರೆದಿರುವ ಜನರಿಗೆ ಯಾವುದೇ ರೀತಿಯ ಲೌಕಿಕ ಪ್ರಯೋಜನವಿಲ್ಲ. ಬದಲು ಈ ಜನರು ದೂರ ದೂರದಿಂದ ಹಣ ಖರ್ಚು ಮಾಡಿ ಇಲ್ಲಿಗೆ ಬಂದಿರುತ್ತಾರೆ. ಇದು ಸಹ ಈ ಮಾತಿಗೆ ಸಾಕ್ಷಿಯಾಗಿದೆ. ನೀವು ಸ್ವಯಂ ಮುಸ್ಲಿಮರಾಗಿರಲಿಲ್ಲವಾದರೂ ಸತ್ಯ ಶೋಧನೆ ದೃಷ್ಟಿಯಿಂದ ಇಲ್ಲಿಗೆ ಬಂದಿರುತ್ತೀರಿ.

* ಜರ್ಮನ್ ಮಹಿಳಾ ಪತ್ರಕರ್ತೆ ತಮ್ಮ ಅಂತಿಮ ಪ್ರಶ್ನೆ ಕೇಳುತ್ತ ಹೇಳಿದರು. ಜರ್ಮನಿಯ ಜನರಿಗಾಗಿ ನಿಮ್ಮ ಸಂದೇಶವೇನು?

ಆಗ ಹುಝೂರ್ ಹೇಳಿದರು. ಜರ್ಮನ್ ಜನವರು ವಿಶಾಲ ಮನೋಭಾವದವರಾಗಿದ್ದಾರೆ. ಯೂರೋಪಿಯನ್ ಒಕ್ಕೂಟ ರಕ್ಷಣೆಗಾಗಿ ಪ್ರಯತ್ನಪಡುತ್ತಿದ್ದಾರೆ. ನಾನು ಅದೇ ಹೇಳುವೆನು. ನೀವು ಅದನ್ನು ಜಾರಿಯಲ್ಲಿಡಿ. ನಿಮ್ಮ ದೇಶವು ಒಂದು ಇಡೀ ಯೂರೋಪ್ ಒಕ್ಕೂಟದ ಮುಖಂಡತ್ವ ವಹಿಸಬೇಕಾಗಿದೆ. ಅಮೇರಿಕಾ ಬಯಸುವುದು ನೀವು ದುರ್ಬಲರಾಗಬೆಕು. ತೀರ ದುರ್ಬಲರಾಗಬೇಕು ಎಂಬುದೇ ಅವರ ಬಯಕೆ. ಆದರೆ ನೀವು ನಿಮ್ಮ ದೇಶ ಮತ್ತು ಈ ಉಪಖಂಡವನ್ನು ಶಾಂತಿಪೂರ್ಣವಾಗಿಸ ಬಯಸುವುದಾದರೆ ನೀವು ಒಗ್ಗೂಡಿ ಇರಬೇಕಾಗುತ್ತದೆ.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 05 August 2021, Issue No. 31

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 30ರ ವರದಿಯ ಉಳಿದ ಭಾಗ)**

### ಕ್ರೊಷಿಯನ್ ಮತ್ತು ಜರ್ಮನ್ ಮಹಿಳಾ ಪತ್ರಕರ್ತರರಿಂದ ಹುಝೂರರ ಸಂದರ್ಶನ

ಕಾರ್ಯಕ್ರಮದನ್ವಯ ಕ್ರೋಷಿಯದಿಂದ ಬಂದ ಇಬ್ಬರು ಮಹಿಳಾ ಪತ್ರಕರ್ತರು ಮತ್ತು ಓರ್ವ ಜರ್ಮನ್ ಮಹಿಳಾ ಪತ್ರಕರ್ತೆ ಹುಝೂರರ ಸಂದರ್ಶನ ನಡೆಸಿದರು.

ಕ್ರೋಷಿಯಾದಿಂದ ಬಂದ ಮಹಿಳಾ ಪತ್ರಕರ್ತರು ಜಲ್ಸದ ವಿವಿಧ ಕಾರ್ಯಕ್ರಮಗಳ ಮತ್ತು ಸ್ಥಳಗಳ Documentry film ತಯಾರಿಸಿದ್ದರು. ಅವರು ಹಿಂತಿರುಗಿಸಿದ ನಂತರ ಕ್ರೊವೇಷಿಯ ಟಿ.ವಿಯವರು ಅದನ್ನು ಬಿತ್ತರಿಸಿದರು.

ಜರ್ಮನ್ ಮಹಿಳಾ ಪತ್ರಕರ್ತೆಯು ಜರ್ಮನಿಯ ಬಹುದೊಡ್ಡ ಆಲ್‌ಲೈನ್ ಪತ್ರಿಕೆಯವರಾಗಿದ್ದು, ಈ ಪತ್ರಿಕೆಯ ಪ್ರಸಾರ ಹದಿನೇಳೂವರೆ ಮಿಲಿಯನ್‌ಗಿಂತ ಅಧಿಕವಾಗಿದೆ. ಹುಝೂರರ ಈ ಸಂದರ್ಶನವು ಪ್ರಸಕ್ತ ಆನ್‌ಲೈನ್ ಪತ್ರಿಕೆಯಲ್ಲಿದ್ದದ್ದು ಎರಡು ಹಂತದಲ್ಲಿ ಇದು ಪ್ರಸಾರಗೊಳ್ಳಲಿದೆ. ಹೀಗೆ ಎರಡು ಹಂತದಲ್ಲಿ ಪ್ರಸಾರಗೊಳ್ಳುವ ಪರಿಣಾಮವಾಗಿ ಒಟ್ಟು ಸಂಖ್ಯೆ 34 ಮಿಲಿಯನ್ ಆಗಬಹುದು.

* ಜರ್ಮನ್ ಮಹಿಳೆ ಪ್ರಶ್ನೆ ಮಾಡಿದರು. ನೀವು ಜರ್ಮನ್ ಪತ್ರಿಕೆಗೆ ಸಂದರ್ಶನ ನೀಡುವ ಸಮಯದಲ್ಲಿ ಹೇಳಿದ್ದೀರಿ. ಇಂದಿನ ಅತ್ಯಂತ ಅಪಾಯಕರ ವಿಷಯವೆಂದರೆ ಯುವಕರು ಅಲ್ಲಾಹನಿಂದ (ದೇವನಿಂದ) ದೂರವಾಗಿದ್ದಾರೆ. ನಿಮ್ಮ ಅಭಿಪ್ರಾಯದಲ್ಲಿ ಹೀಗೇಕೆ ಆಗಿದೆ?

ಅದರ ಉತ್ತರವಾಗಿ ಹುಝೂರ್ ಹೇಳಿದರು. ಕೇವಲ ಯುವಕರಷ್ಟೇ ಅಲ್ಲ. ಬದಲು ಜನರ ಒಂದು ಭಾರಿ ಸಂಖ್ಯೆ ಧರ್ಮದಿಂದ ದೂರ ಸರಿಯುತ್ತಿದೆ. ದೇವಾಸ್ತಿತ್ವದ ಮೇಲೆ ನಂಬಿಕೆಯೇ ಇಲ್ಲದಂತಾಗಿದೆ. ಅದನ್ನು ಕೇವಲ ಯುವಕರೊಡನೆ ಜೋಡಿಸಿ ನೋಡುವ ಹಾಗಿಲ್ಲ. ಬದಲು ಇತರರು ಸಹ ಅದರಲಿ ಒಳಗೊಂಡಿದ್ದಾರೆ. ಆದರೆ ನಾನು ಹೇಳಿದ್ದು ಉಗ್ರವಾದಿಗಳು ಖಿನ್ನತೆ ಪಡೆದವರಾಗಿದ್ದಾರೆ. ಯುವ ಪೀಳಿಗೆಯು ಅದರಲ್ಲಿ ಶಾಮೀಲಾಗಿದೆ. ನಾನು ಹೇಳಿದ್ದೆ ಅದಕ್ಕೆ. ಹಲವು ಕಾರಣಗಳಿವೆ. ಅಂದ ಹಾಗೆ ಇಂತಹ ಸಮಯದಲ್ಲಿ ಅವರ ಮನಸ್ಸುಗಳಿಗೆ ತೃಪ್ತಿ ನೀಡುವ ಅಗತ್ಯವಿರುತ್ತದೆ. ಆದರೆ ಯಾರು ಸಹ ಅವರಿಗೆ ಮಾರ್ಗದರ್ಶಕರಿಲ್ಲ. ಆದುದರಿಂದ ಅವರು ನೇರ ಮಾರ್ಗ ಬಿಟ್ಟು ದಾರಿ ತಪ್ಪಿದವರಿಗೆ ಗುರಿಯಾಗುತ್ತಾರೆ. ಅವರು ಸಹ ಮಾರ್ಗದರ್ಶಕರಿಲ್ಲದೇ ತಪ್ಪು ದಾರಿ ಹಿಡಿದಿರುತ್ತಾರೆ. ಹೀಗೆ ಅದಕ್ಕೆ ಹಲವು ಕಾರಣಗಳಿವೆ. ಈಗ ನನ್ನ ದೃಷ್ಟಿಯಲ್ಲಿ ಆಗ ಇದ್ದ ನಿರ್ದಿಷ್ಟ ಪ್ರಶ್ನೆ ಏನಿತ್ತು ಎಂಬುದಿಲ್ಲ. ನಿಮ್ಮ ದೃಷ್ಟಿಯಲ್ಲಿದ್ದರೆ ಕೇಳಬಹುದು.

* ಸಂದರ್ಶನ ಪಡೆಯುವ ಮಹಿಳೆ ಪ್ರಶ್ನೆ ಕೇಳಿದರು. ನೀವು ಒಂದು ಸಂದರ್ಭದಲ್ಲಿ ಹೇಳಿದ್ದೀರಿ ಯಾರು ಉಗ್ರವಾದದೆಡೆಗೆ ಹೋಗುತ್ತಿದ್ದಾರೆ. ಅದು ಅವರ ತಪ್ಪಲ್ಲ ಉಗ್ರವಾದದೆಡೆ ಕರೆ ನೀಡುವವರ ತಪ್ಪಾಗಿದೆ.

ಆಗ ಹುಝೂರ್ ಹೇಳಿದರು. ನಾನು ಹೀಗೆ ಎಂದೂ ಹೇಳಿಲ್ಲ. ಬದಲು ನಾನು ಹೇಳಿದ್ದು. ಯಾವ ಜನರು ತಮ್ಮ ದುಷ್ಕರ್ಮಗಳ ಫಲವಾಗಿ ಆ ಯುವಕರನ್ನು ಗುರಿ ಮಾಡುತ್ತಿದ್ದಾರೋ ಅವರು ನಿಜ ಅರ್ಥದಲ್ಲಿ ಅಪರಾಧಿಯಾಗಿದ್ದಾರೆಯೇ ಹೊರತು ಅದಕ್ಕೆ ಗುರಿಯಾದವರಲ್ಲ. ಅವರಲ್ಲಿ ಎಷ್ಟೋ ಜನರು ಮುಗ್ಧರಾಗಿರುತ್ತಾರೆ. ನಾಮಧಾರಿ ಮೌಲ್ವಿಗಳು ಅವರನ್ನು ತಪ್ಪು ದಾರಿಯ ಮೇಲೆ ನಡೆಸುತ್ತಿದ್ದಾರೆ.

* ಮಹಿಳೆಯು ಪ್ರಶ್ನೆ ಕೇಳಿದರು. ಇಂತಹ ಸಂದರ್ಭದಲ್ಲಿ ಅಹ್ಮದಿಯ ಜಮಾಅತಿನ ಕಾರ್ಯ ಸಾಧನೆಯೇನು?

ಆಗ ಹುಝೂರ್ ಹೇಳಿದರು. ನಾವು ನಮ್ಮ ಸಾಧ್ಯತೆಯಲ್ಲಿರುವ ಎಲ್ಲವೂ ಮಾಡುತ್ತೇವೆ. ಒಂದು ಸಾಮಾನ್ಯ ರೀತಿಯಲ್ಲಿ ನಾವು ಏನು ಮಾಡಬಹುದು? ಈ ಪೈಕಿ ನಾವು ಪ್ರೀತಿ, ಸ್ನೇಹ, ಹಾಗೂ ಸಹೋದರತೆಯಿಂದ ಪ್ರಚಾರ ಮಾಡುತ್ತೇವೆ. ಇದುವೇ ಇಸ್ಲಾಮಿನ ಯಥಾರ್ಥ ಶಿಕ್ಷಣವಾಗಿದೆ. ಜನರಿಗೆ ಹೇಳುತ್ತೇವೆ. ಉಗ್ರವಾದದ ಬದಲಿಗೆ ಇಸ್ಲಾಮಿನ ಯಥಾರ್ಥ ಶಿಕ್ಷಣವನ್ನು ಅನುಸರಿಸಬೇಕು. ಎರಡನೆಯದಾಗಿ ನಮ್ಮ ಯುವ ಪೀಳಿಗೆ ಅಂದರೆ ಅಹ್ಮದಿಯ ಯುವಕರನ್ನು ನನ್ನ ಅಭಿಪ್ರಾಯದಲ್ಲಿ ಎಂದೂ ನೀವು ಆ ಜನರಿಗೆ ಗುರಿಯಾಗುವುದನ್ನು ನೋಡಲಾರಿರಿ. ಅಥವಾ ಆ ಮೌಲ್ವಿಗಳ ಕಾರಣದಿಂದ ಉಗ್ರವಾದಕ್ಕೆ ತುತ್ತಾಗಿದ್ದು ಕಾಣಲಾರಿರಿ. ಅದೇ ಮಹಿಳೆ ಪ್ರಶ್ನೆ ಕೇಳಿದರು. ಅಹ್ಮದಿ ಯುವಕರಿಗಲ್ಲದೇ ತಾವು ಇತರರಿಗೆ ಏನು ಮಾಡಬಲ್ಲಿರಿ?

ಆಗ ಹುಝೂರ್ ಹೇಳಿದರು. “ನೋಡಿ ನಾವು ಕೇವಲ ತಬ್ಲೀಗ್ ಮಾಡಬಹುದು. ನಾವು ನಮ್ಮ ಸಂಸ್ಥೆಗಳನ್ನು ಹೊಂದಿದ್ದೇವೆ. ನಮ್ಮ ಜಮಾಅತಿನ ಕೆಲಸ ಪ್ರಚಾರ ಮಾಡುವುದು ಆಗಿರುತ್ತದೆ. ಅದು ನಾವು ಮಾಡುತ್ತಿದ್ದೇವೆ.

* ಅನಂತರ ಕ್ರೊವೇಷಿಯನ್ ಮಹಿಳೆ ಪ್ರಶ್ನೆ ಕೇಳಿದರು. ಕೇವಲ ಪ್ರಚಾರ ಸಾಕಾಗುವುದಿಲ್ಲವಲ್ಲ. ತಾವು ಓರ್ವ ಆಧ್ಯಾತ್ಮಿಕ ಮಾರ್ಗದರ್ಶಕರಾದ ನೆಲೆಯಲ್ಲಿ ಏನು ಮಾಡಬಹುದು?

ಆಗ ಹುಝೂರ್ ಹೇಳಿದರು. ಪ್ರಚಾರ ಮಾಡುವ ಜೊತೆ ಜೊತೆಯಲ್ಲಿ ನಾವು ಇತರ ಕಾರ್ಯಯೋಜನೆಗಳನ್ನು ಉಪಯೋಗಿಸುತ್ತೇವೆ. ನನಗೆ ಯಾವುದೇ ಸಂಸದ್ ಸಭೆಯಲ್ಲಿ ಹೇಳುವ ಸಂದರ್ಭ ಒದಗಿ ಬಂದಾಗ ಅಥವಾ ವಿದ್ಯಾವಂತರು ಒಟ್ಟುಗೂಡಿದ ಪಕ್ಷದಲ್ಲಿ, ನಾನು ಯಾವಾಗಲೂ ಹೇಳುತ್ತಿರುತ್ತೇನೆ. ಇಸ್ಲಾಮಿನ ಯಥಾರ್ಥ ಶಿಕ್ಷಣದಿಂದ ಅವಗತರನ್ನಾಗಿ ಮಾಡುವ ಪ್ರಯತ್ನ ಮಾಡುತ್ತೇನೆ. ಸಾಮಾನ್ಯ ಮುಸ್ಲಿಮರಿಗೆ ಅಥವಾ ವಿಶೇಷವಾಗಿ ಯುವ ಪೀಳಿಗೆಗೆ ಹೇಳುತ್ತೇನೆ, ನೀವು ಮಾಡುತ್ತಿದ್ದದ್ದೆಲ್ಲ ಇಸ್ಲಾಮಿನ ನಿಜವಾದ ಶಿಕ್ಷಣಕ್ಕೆ ಅನುಗುಣವಾಗಿಲ್ಲ. ಹೀಗೆ ತನಗೆ ಲಭ್ಯವಿರುವ ಮಾಧ್ಯಮಗಳಿಂದ ಏನೆಲ್ಲ ಮಾಡಬಹುದೋ ಮಾಡುತ್ತಿದ್ದೇನೆ.

* ಆ ಮಹಿಳೆ ಪತ್ರಕರ್ತೆ ಪ್ರಶ್ನೆ ಕೇಳಿದರು. ಭವಿಷ್ಯದಲ್ಲಿ ಅಹ್ಮದಿಯಾ ಜಮಾಅತ್ ಹೆಚ್ಚು ಪ್ರಗತಿ ಹೊಂದುವುದು ಜನರು ಅದರಿಂದ ಪ್ರಭಾವಿತರಾಗುವರು ಎಂಬುದಾಗಿ ನೀವು ಭಾವಿಸುವಿರಾ? ಆಗ ಹುಝೂರ್ ಹೇಳಿದರು. ನಾನು ಯಾವಾಗಲೂ ಆಶಾವಾದಿಯಾಗಿದ್ದೇನೆ.

* ಮಹಿಳಾ ಪತ್ರಕರ್ತೆ ಪ್ರಶ್ನಿಸಿದರು. ಹೀಗೆ ಕಾಲ ಮುಂದುವರೆಯುತ್ತಾ ಇದೆ ಅದಕ್ಕೆ ತಕ್ಕಂತೆ ಧರ್ಮದಲ್ಲಿಯೂ ಬದಲಾವಣೆ ಆಗುವುದೇ? ಧರ್ಮವು ಜನರ ಕಾರಣದಿಂದಾಗಿ ಬದಲಾವಣೆ ಹೊಂದಬೇಕು ಅಥವಾ ಜನರಿಗಾಗಿ ಧರ್ಮಕಾರಣಗಳಿಂದಾಗಿ ಬದಲಾಗುವ ಅವಶ್ಯಕತೆ ಇದೆ? ಈ ಪೈಕಿ ನಿಮ್ಮ ಅಭಿಪ್ರಾಯವೇನು?

ಆಗ ಹುಝೂರ್ ಹೇಳಿದರು. ಅದೇ ಮಾತನ್ನು ನಾನು ಕುತುಬ ಜುಮಾದಲ್ಲಿ ವಿವರಿಸಿದ್ದೆ. ಅದೇನೆಂದೆ ಧರ್ಮವು ಜನರಿಗೆ ಮಾರ್ಗದರ್ಶಕವಾಗಿದೆ. ಜನರು ಧರ್ಮಕ್ಕೆ ಮಾರ್ಗದರ್ಶನ ಮಾಡಲು ಹೊರಟರೆ ಯಾವ ಧರ್ಮದ ಅವಶ್ಯಕತೆಯೇ ಇರಲಿಕ್ಕಿಲ್ಲ. ಇತ್ತೀಚೆಗೆ ಬಂದಿರುವ ವಿವಿಧ ಪಕ್ಷಗಳು ಉದಾಹರಣೆಗೆ Socialist party, SDP, Green party ಇನ್ನಿತರರ ಪಕ್ಷಗಳು ಮತ್ತು ಪ್ರತಿಯೊಂದು ಪಕ್ಷವು ತನ್ನ ಪ್ರನಾಳಿಕೆಯಂತೆ ಧರ್ಮವನ್ನು ಮಾರ್ಪಾಟು ಮಾಡಬಹುದು.

ಹುಝೂರೆ ಅನ್ವರ್(ಅಬಅ) ಹೇಳಿದರು. ಅಂದಹಾಗೆ ಅಹ್ಮದಿಯಾ ಜಮಾಅತಿನ ಪ್ರಣಾಳಿಕೆಯು ಪವಿತ್ರ ಖುರ್‌ಆನ್ ಆಗಿದೆ. ನಮಗಾಗಿ ಅದೇ ಮಾರ್ಗದರ್ಶಕ ತತ್ವಗಳಾಗಿವೆ. ಅದರ ಮೇಲೆಯೇ ನಮಗೆ ದೃಢವಾದ ನಂಬಿಕೆಯಿದೆ. ಈ ಪವಿತ್ರ ಗ್ರಂಥವು ಎಲ್ಲ ಮಾನವರಿಗೆ ಮಾರ್ಗದರ್ಶಕವಾಗಿದೆ. ನಮ್ಮ ದೃಢವಾದ ವಿಶ್ವಾಸವಿದೆ. ಪವಿತ್ರ ಖುರ್‌ಆನ್ ಅವತರಣೆಗೊಂಡು 1500 ವರ್ಷ ಕಳೆದರೂ ಇಂದಿಗೂ ಸುರಕ್ಷಿತವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಒಂದು ವಚನವಿದೆ. ಅದು ಸೂಚಿಸುವುದೆನೆಂದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನ ಶಿಕ್ಷಣವನ್ನು ಮತ್ತು ವಚನಗಳನ್ನು ಎಲ್ಲ ಕಾಲಕ್ಕೂ ಸುರಕ್ಷಿತವಾಗಿಡುವನು. ಇಂದಿನವರೆಗೆ ಆ ಮಾತು ಸತ್ಯವಾಗಿದೆ. ಹೀಗಿರುವಾಗ ನಮಗೆ ಬೇರೆಯವರ ಸಹಾಯ ಪಡೆಯುವ ಅಥವಾ ಇನ್ನಿತರಡೆ ನೋಡುವ ಅವಶ್ಯಕತೆ ಇಲ್ಲ. ನಾವು ಜನರಿಗೆ ಹೇಳುತ್ತೇವೆ. ನಿಮಗೆ ಏನಾದರೂ ಸಮಸ್ಯೆ ಉಂಟಾದರೆ ಅಥವಾ ನಿಮಗೆ ಪವಿತ್ರ ಖುರ್‌ಆನ್‌ನ ವಚನಗಳು ಅರ್ಥವಾಗಲಿಲ್ಲವಾದರೆ ಅದು ನಾಮಧಾರಿ ಮುಸ್ಲಿಮ್ ಉಲಮಾ ಅವರು ಇಸ್ಲಮಿ ಶಿಕ್ಷಣವನ್ನು ಹಾಳುಗೆಡವಿದರ ಫಲದಿಂದಾಗಿದೆ. ಅವರು ತಪ್ಪು ದಾರಿಯಲ್ಲಿ ನಡೆಸುತ್ತಿದ್ದಾರೆ. ಅವರು ನಮ್ಮ ಬಳಿ ಬಂದರೆ ನಾವು ಅವರಿಗೆ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡುವೆನು.

ಹುಝೂರೆ ಅನ್ವರ್(ಅಬಅ) ನುಡಿದರು. ನೀವು ಇಸ್ಲಾಮಿ ಶಿಕ್ಷಣವನ್ನು ಇಂದಿನ ಯುಗಕ್ಕೆ ಹೊಂದುವಂತೆ ಇಲ್ಲ ಎಂದು ಏನಾದರೂ ಭಾವಿಸಿಕೊಂಡಿದ್ದರೆ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.